

सत्यमेव जयते
Government of India

निष्पक्ष खेल
Play fair

NATIONAL
ANTI DOPING
AGENCY
INDIA

ಫೇರ್ ಪ್ಲೇ ಗೈಡ್

ನಾಡಾ ಇಂಡಿಯಾ

ನಿಜ ಆಡಿ,
ನ್ಯಾಯಯುತ ಆಡಿ

ಲಿಂಕ್‌ಟ್ರೀಗಾಗಿ
ಕ್ಯೂಆರ್ ಕೋಡ್

ಸುಜಾತಾ ಚತುರ್ವೇದಿ, ಐಎಎಸ್
ಕಾರ್ಯದರ್ಶಿ
Sujata Chaturvedi, IAS
Secretary

ಭಾರತ ಸರ್ಕಾರ
ಕ್ರೀಡಾ ಇಲಾಖೆ
ಯುವಜನ ವ್ಯವಹಾರ ಮತ್ತು
ಕ್ರೀಡಾ ಸಚಿವಾಲಯ
Government of India
Department of Sports
Ministry of Youth Affairs & Sports



ಮುನ್ನುಡಿ

ಕ್ರೀಡೆಯು ಜನರನ್ನು ಒಂದುಗೂಡಿಸುವ, ಗಡಿಗಳನ್ನು ಮರೆಸುವ ಮತ್ತು ವ್ಯಕ್ತಿಗಳು ಶ್ರೇಷ್ಠತೆಗಾಗಿ ಶ್ರಮಿಸಲು ಪ್ರೇರೇಪಿಸುವ ಪ್ರಬಲ ಶಕ್ತಿಯಾಗಿದೆ. ಕ್ರೀಡೆಯನ್ನು ನ್ಯಾಯಸಮ್ಮತೆ, ಸಮಗ್ರತೆ ಮತ್ತು ಗೌರವದಂತಹ ಮೌಲ್ಯಗಳನ್ನು ಮೂಲತತ್ವವಾಗಿಟ್ಟುಕೊಂಡು ರಚಿಸಲಾಗಿದೆ. ಈ ಮೌಲ್ಯಗಳನ್ನು ಸಂರಕ್ಷಿಸಲು ಮತ್ತು ಉತ್ತೇಜಿಸಲು, ಎಲ್ಲಾ ಹಂತಗಳಲ್ಲಿ ಸಮಗ್ರ ಮತ್ತು ಸುಸ್ಥಿರ ಕ್ರೀಡಾ ಅಭಿವೃದ್ಧಿಯತ್ತ ನಾವು ದೃಢವಾದ ಬದ್ಧತೆಯನ್ನು ಹೊಂದುವುದು ಅತ್ಯಗತ್ಯವಾಗಿದೆ.

ಭಾರತವು ಜಾಗತಿಕ ಕ್ರೀಡಾ ರಾಷ್ಟ್ರವಾಗಿ ಉಚ್ಛ್ರಾಯ ಸ್ಥಿತಿಯಲ್ಲಿರುವಂತೆಯೇ, ಕ್ರೀಡೆಯನ್ನು ಪಾರದರ್ಶಕಗೊಳಿಸುವ ನಮ್ಮ ಬದ್ಧತೆಯು ಕೇವಲ ನಿಯಂತ್ರಕ ಅಗತ್ಯವಷ್ಟೇ ಅಲ್ಲದೇ ನೈತಿಕ ಅವಶ್ಯಕತೆಯೂ ಆಗಿದೆ. ಯಾವುದೇ ರೂಪದ ಡೋಪಿಂಗ್, ಕ್ರೀಡೆಯ ಮೂಲಭೂತ ಮೌಲ್ಯಗಳನ್ನು ನಾಶಮಾಡುತ್ತದೆ ಮತ್ತು ಪ್ರಾಮಾಣಿಕ ಸ್ಪರ್ಧೆಯ ಮನೋಭಾವವನ್ನು ಕುಗ್ಗಿಸುತ್ತದೆ. ಈ ಸಂದರ್ಭದಲ್ಲಿ, ಶಿಕ್ಷಣವು ನಮ್ಮ ಅತ್ಯಂತ ಶಕ್ತಿಶಾಲಿ ಸಾಧನವಾಗಿದೆ. ಡೋಪಿಂಗ್ ತಡೆಗಟ್ಟುವುದು ಕೇವಲ ಜಾರಿಗೊಳಿಸುವಿಕೆಗೆ ಮಾತ್ರವಲ್ಲದೇ ಕ್ರೀಡಾಪಟುಗಳು ಮತ್ತು ಕ್ರೀಡಾ ಪರಿಸರ ವ್ಯವಸ್ಥೆಯ ಎಲ್ಲಾ ಸದಸ್ಯರಲ್ಲಿ ಅರಿವು, ಜವಾಬ್ದಾರಿ ಮತ್ತು ನೈತಿಕ ನಿರ್ಧಾರ ತೆಗೆದುಕೊಳ್ಳುವಿಕೆಯತ್ತ ಪ್ರಬಲವಾದ ಅಡಿಪಾಯವನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದೆ. ನಾಡಾ ಭಾರತವು ಅಭಿವೃದ್ಧಿಪಡಿಸಿದ ನ್ಯಾಯಯುತ ಆಟದ ಮಾರ್ಗದರ್ಶಿ, ಈ ವಿಧಾನವನ್ನು ಪ್ರತಿಫಲಿಸುವ ಶ್ಲಾಘನೀಯ ಉಪಕ್ರಮವಾಗಿದೆ.

ಈ ಮಾರ್ಗದರ್ಶಿಯು ಕ್ರೀಡಾಪಟುಗಳು, ತರಬೇತುದಾರರು ಮತ್ತು ಸಹಾಯಕ ಸಿಬ್ಬಂದಿಗೆ ಡೋಪಿಂಗ್ ತಡೆ ಕ್ರಮಗಳ ಪ್ರಾಮುಖ್ಯತೆ, ಉಲ್ಲಂಘನೆಗಳ ಪರಿಣಾಮಗಳು ಮತ್ತು ಕ್ರೀಡೆಯ ಸಮಗ್ರತೆಯನ್ನು ರಕ್ಷಿಸುವಲ್ಲಿ ಪ್ರತಿಯೊಬ್ಬ ಪಾಲುದಾರರು ವಹಿಸುವ ಮಹತ್ವದ ಪಾತ್ರವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಸಮಗ್ರ ಸಂಪನ್ಮೂಲವಾಗಿ ಕಾರ್ಯನಿರ್ವಹಿಸುತ್ತದೆ. ಇದು ಪಾರದರ್ಶಕ ಸ್ಪರ್ಧೆಯನ್ನು ಉತ್ತೇಜಿಸುವುದರೊಂದಿಗೆ ಯಶಸ್ಸು ಪ್ರತಿಭೆ, ಕಠಿಣ ಪರಿಶ್ರಮ ಮತ್ತು ದೃಢನಿಷ್ಠೆಯ ಫಲಿತಾಂಶವಾಗಿದೆಯೇ ಹೊರತು ಅಡ್ಡಹಾದಿಗಳದ್ದಲ್ಲ ಎಂಬ ಸಂಸ್ಕೃತಿಯನ್ನು ಪ್ರೋತ್ಸಾಹಿಸುತ್ತದೆ.

ಪಾರದರ್ಶಕ ಕ್ರೀಡೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ನಾಡಾ ಭಾರತದ ಅಚಲ ಸಮರ್ಪಣೆಯನ್ನು ನಾನು ಶ್ಲಾಘಿಸುತ್ತೇನೆ. ಕ್ರೀಡೆಯಲ್ಲಿ ನ್ಯಾಯ, ಸಮಗ್ರತೆ ಮತ್ತು ಶ್ರೇಷ್ಠತೆಯ ತತ್ವಗಳನ್ನು ಎತ್ತಿಹಿಡಿಯಲು ಬದ್ಧರಾಗಿರುವ ಎಲ್ಲರಿಗೂ ಈ ಮಾರ್ಗದರ್ಶಿ ಅಮೂಲ್ಯವಾದ ಸಂಪನ್ಮೂಲವಾಗಲಿದೆ ಎನ್ನುವುದರಲ್ಲಿ ನನಗೆ ಯಾವುದೇ ಸಂದೇಹವಿಲ್ಲ.

11/4/25
(Sujata Chaturvedi)

ಕೊಠಡಿ ಸಂಖ್ಯೆ 3, 'ಸಿ' ವಿಂಗ್, ಶಾಸ್ತ್ರಿ ಭವನ, ನವದೆಹಲಿ-110001 ದೂ.: 011-23388623
Room No. 3, 'C' Wing, Shastri Bhawan, New Delhi-110001 Tel.: 23388623
ಫ್ಯಾಕ್ಸ್: 011-23388758, ಇ-ಮೇಲ್: secy-sports@nic.in



ಮಹಾನಿರ್ದೇಶಕರ ಸಂದೇಶ

ಭಾರತದ ಕ್ರೀಡಾ ಸಮುದಾಯದಲ್ಲಿ ಪಾರದರ್ಶಕ ಕ್ರೀಡೆ, ನೈತಿಕ ನಡವಳಿಕೆ ಮತ್ತು ಮಾಹಿತಿಯುಕ್ತ ನಿರ್ಧಾರ ತೆಗೆದುಕೊಳ್ಳುವಿಕೆಯ ಸಂಸ್ಕೃತಿಯನ್ನು ಬೆಳೆಸಲು ವಿನ್ಯಾಸಗೊಳಿಸಲಾದ ಸಮಗ್ರ ಮತ್ತು ಲಭ್ಯತೆಯುಳ್ಳ ಸಂಪನ್ಮೂಲವಾದ ನಾಡಾ ಭಾರತದ ನ್ಯಾಯಯುತ ಆಟದ ಮಾರ್ಗದರ್ಶಿಯನ್ನು ಪ್ರಸ್ತುತಪಡಿಸಲು ನನಗೆ ತುಂಬಾ ಸಂತಸವಾಗುತ್ತಿದೆ.

ನಾಡಾ ಭಾರತದಲ್ಲಿ ಕ್ರೀಡಾಪಟುಗಳು, ತರಬೇತುದಾರರು ಮತ್ತು ಸಹಾಯಕ ಸಿಬ್ಬಂದಿಗಳಲ್ಲಿ ಜಾಗೃತಿ, ಶಿಕ್ಷಣ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸುವ ಮೂಲಕ ಪಾರದರ್ಶಕ ಕ್ರೀಡೆಯ ಸಂಸ್ಕೃತಿಯನ್ನು ನಿರ್ಮಿಸಲು ನಾವು ಶ್ರಮಿಸುತ್ತಿರುವುದರಿಂದ ನಮ್ಮ ಧ್ಯೇಯವು ಜಾರಿಗೊಳಿಸುವಿಕೆಗಿಂತ ಹೆಚ್ಚಿನದಾಗಿದೆ. ಈ ಪ್ರಕಟಣೆಯ ಮೂಲಕ, ನಾವು ಪಾಲುದಾರರು ವಿಧೇಯರಾಗಿರುವಂತೆ, ಉದ್ದೇಶಪೂರ್ವಕವಲ್ಲದ ಉಲ್ಲಂಘನೆಗಳನ್ನು ಮಾಡದಂತೆ ಮತ್ತು ನ್ಯಾಯಯುತ ಆಟದ ರಾಯಭಾರಿಗಳಾಗಲು ಅಗತ್ಯವಾದ ಅರಿವನ್ನು ಹೊಂದಿರುವಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತೇವೆ.

ನಿಜವಾದ ಕ್ರೀಡಾ ಶ್ರೇಷ್ಠತೆಯನ್ನು ಪ್ರತಿಭೆ ಮತ್ತು ಕಠಿಣ ಪರಿಶ್ರಮದಿಂದ ಮಾತ್ರವಲ್ಲದೆ, ಸಮಗ್ರತೆ ಮತ್ತು ನಿಯಮಗಳಿಗೆ ಗೌರವ ನೀಡುವ ಮೂಲಕವೂ ಸಾಧಿಸಬಹುದು ಎಂಬ ನಮ್ಮ ನಂಬಿಕೆಯನ್ನು ಇದು ಪ್ರತಿಫಲಿಸುತ್ತದೆ.

ಕ್ರೀಡಾ ಭ್ರಾತೃತ್ವದ ಎಲ್ಲಾ ಪಾಲುದಾರರು ಈ ಮಾರ್ಗದರ್ಶಿಯನ್ನು ಅಮೂಲ್ಯವಾದ ಉಲ್ಲೇಖವಾಗಿ ಬಳಸಿಕೊಳ್ಳಲು ಮತ್ತು ಕ್ರೀಡೆಯ ಪಾವಿತ್ರ್ಯವನ್ನು ಎತ್ತಿಹಿಡಿಯುವ ಸಾಮೂಹಿಕ ಧ್ಯೇಯಕ್ಕೆ ಸಕ್ರಿಯವಾಗಿ ಕೊಡುಗೆ ನೀಡಲು ನಾನು ಪ್ರೋತ್ಸಾಹಿಸುತ್ತೇನೆ.

ಅನಂತ್ ಕುಮಾರ್
ಮಮಹಾ ನಿರ್ದೇಶಕರು
ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಸಂಸ್ಥೆ ಭಾರತ

ವಿಷಯಗಳು

ಡೋಪಿಂಗ್ ತಡೆಯ ಪರಿಚಯ	1
ಸ್ವಚ್ಛ ಕ್ರೀಡೆಗೆ ಸಂಬಂಧಿಸಿದ ತತ್ವಗಳು ಮತ್ತು ಮೌಲ್ಯಗಳು	2-3
ಕ್ರೀಡಾಪಟುಗಳು ಮತ್ತು ಕ್ರೀಡಾಪಟು ಬೆಂಬಲ ಸಿಬ್ಬಂದಿಗಳ ಹಕ್ಕುಗಳು ಮತ್ತು ಜವಾಬ್ದಾರಿಗಳು	4-6
ಕಟ್ಟುನಿಟ್ಟಿನ ಹೊಣೆಗಾರಿಕೆಯ ತತ್ವ	7
ಡೋಪಿಂಗ್‌ನ ಪರಿಣಾಮಗಳು	8-9
ಡೋಪಿಂಗ್ ತಡೆ ನಿಯಮದ ಉಲ್ಲಂಘನೆಗಳು	10-11
ಕ್ರೀಡೆಯಲ್ಲಿ ನಿಷೇಧಿತ ವಸ್ತುಗಳು ಮತ್ತು ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು	12-13
ಪೂರಕ ಬಳಕೆಗೆ ಸಂಬಂಧಿಸಿದ ಅಪಾಯಗಳು	14-16
ಔಷಧೋಪಚಾರಗಳ ಬಳಕೆ ಮತ್ತು ಚಿಕಿತ್ಸಕ ಬಳಕೆಯ ವಿನಾಯಿತಿಗಳು	17-18
ಡೋಪಿಂಗ್ ನಿಯಂತ್ರಣ ವಿಧಾನ	19-21
ಕ್ರೀಡಾಪಟು ಇರುವ ಸ್ಥಳ	22
ಧ್ವನಿಯೆತ್ತಿ	23-25

ಡೋಪಿಂಗ್ ತಡೆಯ

ಪರಿಚಯ



ಕ್ರೀಡೆಗಳಲ್ಲಿ ನ್ಯಾಯಯುತವಲ್ಲದ ಪ್ರಯೋಜನವನ್ನು ಪಡೆಯಲು, ನಿಷೇಧಿತ ವಸ್ತುಗಳು ಅಥವಾ ವಿಧಾನಗಳನ್ನು ಕ್ರೀಡಾಪಟುಗಳು ಬಳಸುವುದನ್ನು ತಡೆಯುವ ಉದ್ದೇಶದಿಂದ ವಿನ್ಯಾಸಗೊಳಿಸಲಾದ ನಿಯಮಗಳು, ಅಭ್ಯಾಸಗಳು ಮತ್ತು ಉಪಕ್ರಮಗಳ ಚೌಕಟ್ಟನ್ನು ಡೋಪಿಂಗ್ ತಡೆಯು ಒಳಗೊಂಡಿದೆ. ನ್ಯಾಯಯುತ ಆಟ, ಕ್ರೀಡಾಪಟುಗಳ ಆರೋಗ್ಯ ಮತ್ತು ನೈತಿಕ ನಡವಳಿಕೆಯನ್ನು ಉತ್ತೇಜಿಸುವ ಜೊತೆಗೆ ಸ್ಪರ್ಧೆಯ ಸಮಗ್ರತೆಯನ್ನು ಕಾಪಾಡುವುದು ಡೋಪಿಂಗ್ ತಡೆಯ ಮೂಲತಃ ಉದ್ದೇಶವಾಗಿದೆ.

ಜಾಗತಿಕ ವೇದಿಕೆಯಲ್ಲಿ ವಿಶ್ವ ಉದ್ದೀಪನಾ ಮದ್ದು ತಡೆ ಸಂಸ್ಥೆ (ವಾಡಾ) ಈ ಪ್ರಯತ್ನಗಳನ್ನು ಕ್ರೀಡಾ ಸಂಸ್ಥೆಗಳು ಮತ್ತು ಜಗತ್ತಿನಾದ್ಯಂತ ರಾಷ್ಟ್ರಗಳು ಪಾಲಿಸಬೇಕಾದ ಏಕೀಕೃತ ಮಾನದಂಡಗಳನ್ನು ಒಳಗೊಂಡ ವಿಶ್ವ ಡೋಪಿಂಗ್ ತಡೆ ಸಂಹಿತೆಯ ಮೂಲಕ ನಡೆಸುತ್ತದೆ. ಭಾರತದಲ್ಲಿ, ರಾಷ್ಟ್ರೀಯ ಉದ್ದೀಪನಾ ಮದ್ದು ತಡೆ ಸಂಸ್ಥೆ (ನಾಡಾ) ಈ ನಿಯಮಗಳನ್ನು ಜಾರಿಗೊಳಿಸುವ ಪ್ರಮುಖ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತದೆ. ಭಾರತ ಸರ್ಕಾರದ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಅಡಿಯಲ್ಲಿ ಬರುವ ನಾಡಾ, ಸ್ವಚ್ಛ ಕ್ರೀಡಾ ಸಂಸ್ಕೃತಿಯನ್ನು ಬೆಳೆಸಲು ಮೀಸಲಾಗಿರುವ ಸ್ವಾಯತ್ತ ಸಂಸ್ಥೆಯಾಗಿದೆ.

ಮಾದರಿ ಸಂಗ್ರಹಣೆ, ಫಲಿತಾಂಶ ನಿರ್ವಹಣೆ ಮತ್ತು ತೀರ್ಪು, ಡೋಪಿಂಗ್ ತಡೆಯ ಕುರಿತಾದ ಶಿಕ್ಷಣ ಮತ್ತು ಜಾಗೃತಿ, ಥೆರಪೆಟಿಕ್ ಬಳಕೆಯ ವಿನಾಯಿತಿಗಳು, ಸಮಾಜಿಕ ವಿಜ್ಞಾನ ಸಂಶೋಧನೆ, ಅಂತರರಾಷ್ಟ್ರೀಯ ಸಹಯೋಗ ಮತ್ತು ಗುಪ್ತಚರ ಹಾಗೂ ತನಿಖೆಗಳು ನಾಡಾದ ಪ್ರಮುಖ ಜವಾಬ್ದಾರಿಗಳಾಗಿವೆ. ನೈತಿಕತೆ ಮತ್ತು ಸಮಗ್ರತೆಯ ದೃಢವಾದ ಬದ್ಧತೆಯೊಂದಿಗೆ, ಸ್ಪರ್ಧೆಯನ್ನು ಪ್ರತಿಭೆ, ತರಬೇತಿ ಮತ್ತು ನಿಜವಾದ ಮನೋಭಾವದಿಂದ ನಿರ್ಧರಿಸುವ ಡೋಪಿಂಗ್ ರಹಿತ ಕ್ರೀಡಾ ವಾತಾವರಣವನ್ನು ನಿರ್ಮಿಸಲು ನಾಡಾ ಶ್ರಮಿಸುತ್ತದೆ.

ಸ್ವಚ್ಛ ಕ್ರೀಡೆಗೆ ಸಂಬಂಧಿಸಿದ ತತ್ವಗಳು ಮತ್ತು ಮೌಲ್ಯಗಳು

ಕ್ರೀಡಾ ಮನೋಭಾವವು ಮಾನವ ಚೈತನ್ಯ ದೇಹ ಮತ್ತು ಮನಸ್ಸಿನ ಆಚರಣೆಯಾಗಿದ್ದು ಈ ಕೆಳಗಿನ ಮೌಲ್ಯಗಳನ್ನು ಇದು ನಿರೂಪಿಸುತ್ತದೆ:

1. ನೀತಿ ತತ್ವಗಳು, ನ್ಯಾಯಯುತ ನಡವಳಿಕೆ ಮತ್ತು ಪ್ರಾಮಾಣಿಕತೆ
2. ಆರೋಗ್ಯ
3. ಮೋಜು ಮತ್ತು ಸಂತೋಷ
4. ಕಾರ್ಯಕ್ಷಮತೆಯಲ್ಲಿ ಶ್ರೇಷ್ಠತೆ
5. ಪಾತ್ರ ಮತ್ತು ಶಿಕ್ಷಣ
6. ತಂಡದಿಂದ ಒಡಗೂಡಿದ ಕೆಲಸ
7. ಸಮರ್ಪಣೆ ಮತ್ತು ಬದ್ಧತೆ
8. ನಿಯಮಗಳು ಮತ್ತು ಕಾನೂನುಗಳಿಗೆ ಗೌರವ
9. ತಮ್ಮ ಬಗ್ಗೆ ಇತರ ಸ್ಪರ್ಧಿಗಳ ಬಗ್ಗೆ ಗೌರವ
10. ಧೈರ್ಯ
11. ಸಮುದಾಯ ಮತ್ತು ಒಗ್ಗಟ್ಟು

ಈ ಮೌಲ್ಯಗಳು ಸ್ವಚ್ಛ ಕ್ರೀಡೆಗೆ ಅಗತ್ಯವಾದ ಅಡಿಪಾಯವಾಗಿದೆ. ಕ್ರೀಡಾಪಟುಗಳು ತಾವು ಕೆಲಸ ಮಾಡುವ ಯಾವುದೇ ಕ್ರೀಡಾಪಟುವಿಗೆ ಮತ್ತು ಅವರ ಕ್ರೀಡಾ ಪರಿಸರದಲ್ಲಿರುವ ಯಾವುದೇ ಇತರ ಕ್ರೀಡಾಪಟು ಬೆಂಬಲ ಸಿಬ್ಬಂದಿಗೆ (ಎಎಸ್ಪಿ) ಈ ಮೌಲ್ಯಗಳನ್ನು ಉತ್ತೇಜಿಸಬೇಕು.

ಇವುಗಳಲ್ಲಿ ಮೂರು ಪ್ರಮುಖ ಕ್ರೀಡಾ ಮೌಲ್ಯಗಳಿವೆ

1

ಗೌರವ

ಗೌರವ ಎಂದರೆ ತನ್ನ ಹಾಗೂ ಇತರರ ಬಗ್ಗೆ ಘನತೆಯನ್ನು ಹೊಂದಿರುವುದು. ತಮ್ಮ ಕುರಿತು ಹಾಗೂ ಇತರರ ಕುರಿತು ಕಾಳಜಿಯನ್ನು ತೋರಿಸುವ ಮೂಲಕ ಮತ್ತು ಭಾವನೆಗಳು, ನೈತಿಕ ದ್ವಂದ್ವಗಳು ಮತ್ತು ನಿಯಮಗಳ ಬಗ್ಗೆ ಚಿಂತನೆಯನ್ನು ಉತ್ತೇಜಿಸುವ ಮೂಲಕ ಗೌರವಯುತ ನಡವಳಿಕೆಗಳು, ಸಂವಹನ ಕೌಶಲ್ಯಗಳು ಮತ್ತು ವರ್ತನೆಗಳನ್ನು ಪ್ರೇರೇಪಿಸುವ ಗುರಿಯನ್ನು ಇದು ಹೊಂದಿದೆ.

2

ನೀತಿ

ಎಲ್ಲರೂ ಸಾಧಿಸುವ ಅವಕಾಶದ ಬಗ್ಗೆ ಈ ಅಂಶವು ಹೇಳುತ್ತದೆ. ಈ ಮೌಲ್ಯವು ಎಲ್ಲರೂ ತಮ್ಮ ಪೂರ್ಣ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಸಾಧಿಸಬಹುದಾದ ಅವಕಾಶಗಳನ್ನು ಉತ್ತೇಜಿಸುವುದರ ಮೇಲೆ ಮತ್ತು ಸಮಾನ ಅವಕಾಶಗಳ ಮಹತ್ವವನ್ನು ಅರ್ಥಮಾಡಿಕೊಳ್ಳುವುದರ ಮೇಲೆ ಕೇಂದ್ರೀಕರಿಸುತ್ತದೆ.

3

ಒಳಗೊಳ್ಳುವಿಕೆ

ಒಳಗೊಳ್ಳುವಿಕೆ ಎಂದರೆ ಎಲ್ಲರ ಭಾಗವಹಿಸುವಿಕೆ. ವೈವಿಧ್ಯತೆಯನ್ನು ಆಚರಿಸುವ ಮತ್ತು ಅದರ ಕುರಿತು ಸಂತೋಷಪಡುವ ಮೂಲಕ, ಒಳಗೊಳ್ಳುವಿಕೆ ಮತ್ತು ಪ್ರವೇಶವನ್ನು ಉತ್ತೇಜಿಸಲು ಪರಿಹಾರಗಳನ್ನು ಕಂಡುಕೊಳ್ಳುವ ಮೂಲಕ ಪ್ರತಿಯೊಬ್ಬರ ಭಾಗವಹಿಸುವಿಕೆಯನ್ನು ಪ್ರೇರೇಪಿಸುವುದು ಇದರ ಗುರಿಯಾಗಿದೆ.

ಶಿಕ್ಷಕರು ಮಕ್ಕಳಲ್ಲಿ (8-12 ವರ್ಷ ವಯಸ್ಸಿನ ವಿದ್ಯಾರ್ಥಿಗಳಲ್ಲಿ) ಗೌರವ, ನೀತಿ ಮತ್ತು ಒಳಗೊಳ್ಳುವಿಕೆಯ ಮೌಲ್ಯಗಳನ್ನು ತೊಡಗಿಸಿಕೊಳ್ಳುವ ಚಟುವಟಿಕೆಗಳ ಮೂಲಕ ಬೆಳೆಸುವುದಕ್ಕಾಗಿ ಸಹಾಯ ಮಾಡಲು "ಪ್ರತಿ ತರಗತಿಯಲ್ಲಿನ ಕ್ರೀಡಾ ಮೌಲ್ಯಗಳು" (ಎಸ್ವಿಐಇಸಿ) ಎಂಬ ಟೂಲ್‌ಕಿಟ್ ಅನ್ನು ವಿನ್ಯಾಸಗೊಳಿಸಲಾಗಿದೆ. ಈ ಎಸ್ವಿಐಇಸಿ ಟೂಲ್‌ಕಿಟ್ ವಾಡಾ ಎಡಿಇಎಲ್ ಪ್ಲಾಟ್‌ಫಾರ್ಮ್‌ನಲ್ಲಿ ಲಭ್ಯವಿದೆ ಮತ್ತು ಅದರಲ್ಲಿ ನೋಂದಾಯಿಸಿಕೊಳ್ಳುವ ಮೂಲಕ ಯಾವುದೇ ವ್ಯಕ್ತಿಯು ಇದನ್ನು ಪ್ರವೇಶಿಸಬಹುದು.

https://www.wada-ama.org/en/sport-values-every-classroom

ವಾಡಾದ ಡೋಪಿಂಗ್ ತಡೆ ಇ-ಲರ್ನಿಂಗ್ (ಎಡಿಇಎಲ್) ಪೋರ್ಟಲ್‌ನ ಲಿಂಕ್

www.adel.wada-ama.org

ಕ್ರೀಡಾಪಟುಗಳು ಮತ್ತು ಕ್ರೀಡಾಪಟು ಬೆಂಬಲ ಸಿಬ್ಬಂದಿಗಳ ಹಕ್ಕುಗಳು ಮತ್ತು ಜವಾಬ್ದಾರಿಗಳು

ಈ ಕೆಳಗಿನವುಗಳ ಕ್ರೀಡಾಪಟುಗಳ ಹಕ್ಕುಗಳಾಗಿವೆ

ಸಂಹಿತೆ ಮತ್ತು ಅಂತರರಾಷ್ಟ್ರೀಯ ಮಾನದಂಡಗಳ ಮೂಲಕ ಕ್ರೀಡಾಪಟುಗಳು ಹೊಂದಿರುವ ಹಕ್ಕುಗಳು ಈ ಕೆಳಗಿನಂತಿವೆ:



- ಅವಕಾಶದ ಸಮಾನತೆ
- ಸಮಾನ ಮತ್ತು ನ್ಯಾಯಯುತ ಪರೀಕ್ಷಾ ಪ್ರೋಗ್ರಾಂಗಳು
- ವೈದ್ಯಕೀಯ ಚಿಕಿತ್ಸೆ ಮತ್ತು ಆರೋಗ್ಯ ಹಕ್ಕುಗಳ ರಕ್ಷಣೆ
- ನ್ಯಾಯಕ್ಕಾಗಿ ಹಕ್ಕು
- ಜವಾಬ್ದಾರಿಯ ಹಕ್ಕು
- ವಿಷಲ್ ಬ್ಲೋವರ್ ಹಕ್ಕುಗಳು
- ಶಿಕ್ಷಣದ ಹಕ್ಕು
- ದತ್ತಾಂಶ ರಕ್ಷಣೆಯ ಹಕ್ಕು
- ಪರಿಹಾರದ ಹಕ್ಕು
- ಸಂರಕ್ಷಿತ ವ್ಯಕ್ತಿಗಳ ಹಕ್ಕುಗಳು
- ಮಾದರಿ ಸಂಗ್ರಹಣಾ ಸೆಶನ್ನಲ್ಲಿ ಹಕ್ಕುಗಳು
- ಬಿ ಮಾದರಿ ವಿಶ್ಲೇಷಣೆಗೆ ಹಕ್ಕುಗಳು
- ಪರಿಣಾಮ ಬೀರದಿರುವ ಇತರ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳು
- ಅನ್ವಯಿಸುವಿಕೆ ಮತ್ತು ನಿಲುವು

ಮಾದರಿ ಸಂಗ್ರಹಣೆಯ ಸಮಯದಲ್ಲಿ ಕ್ರೀಡಾಪಟುವಿನ ಹಕ್ಕುಗಳು

- ಡೋಪಿಂಗ್ ನಿಯಂತ್ರಣ ಅಧಿಕಾರಿಯ (ಡಿಸಿಒ) ಗುರುತನ್ನು ನೋಡುವುದು
- ಮಾದರಿ ಸಂಗ್ರಹಣಾ ಪ್ರಕ್ರಿಯೆಯ ಬಗ್ಗೆ, ಅದನ್ನು ಯಾವ ಪ್ರಾಧಿಕಾರದ ಅಡಿಯಲ್ಲಿ ನಡೆಸಲಾಗುತ್ತದೆ ಎಂಬುದರ ಬಗ್ಗೆ ಮತ್ತು ಮಾದರಿ ಸಂಗ್ರಹಣೆಯ ಪ್ರಕಾರದ ಬಗ್ಗೆ ಹೆಚ್ಚುವರಿ ಮಾಹಿತಿಯನ್ನು ವಿನಂತಿಸವುದು.
- ಹೈಡ್ರೇಟ್
- ಒಬ್ಬ ಪ್ರತಿನಿಧಿ ಮತ್ತು ಲಭ್ಯವಿದ್ದರೆ, ಒಬ್ಬ ವ್ಯಾಖ್ಯಾನಕಾರರನ್ನು ಜೊತೆಯಲ್ಲಿ ಇರಿಸಿಕೊಳ್ಳಲು ವಿನಂತಿ.
- ಮಾನ್ಯ ಕಾರಣಗಳೆಂದಾಗಿ ಡೋಪಿಂಗ್ ನಿಯಂತ್ರಣ ಕೇಂದ್ರಕ್ಕೆ ವರದಿ ನೀಡುವಲ್ಲಿ ವಿಳಂಬವಾದರೆ ಅವುಗಳ ಕುರಿತು ವಿನಂತಿ.
- ಅಂಗವೈಕಲ್ಯ ಹೊಂದಿರುವ ಕ್ರೀಡಾಪಟುಗಳಿಗೆ ತಿದ್ದುಪಡಿಗಳ ವಿನಂತಿ (ಅನ್ವಯವಾದರೆ)
- ಅವರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ತಿಳುವಳಿಕೆ ಹೊಂದಿರುವುದು
- ಪ್ರಕ್ರಿಯೆಗಳ ದಾಖಲೆಗಳ ಪ್ರತಿಯನ್ನು ಸ್ವೀಕರಿಸುವುದು
- "ಸಂರಕ್ಷಿತ ವ್ಯಕ್ತಿಗಳಿಗೆ" ಅವರ ವಯಸ್ಸು ಅಥವಾ ಕಾನೂನು ಸಾಮರ್ಥ್ಯದ ಕೊರತೆಯಿಂದಾಗಿ ಹೆಚ್ಚಿನ ರಕ್ಷಣೆಗಳನ್ನು ಪಡೆಯುವುದು.

ಕ್ರೀಡಾಪಟುಗಳ ಜವಾಬ್ದಾರಿಗಳು ಈ ಕೆಳಗಿನಂತಿವೆ

- ವಿಶ್ವ ಡೋಪಿಂಗ್ ತಡೆ ಸಂಹಿತೆಗೆ ಅನುಸಾರವಾಗಿ ನಾಡಾದ ರಾಷ್ಟ್ರೀಯ ಡೋಪಿಂಗ್ ತಡೆ ನಿಯಮಗಳನ್ನು ಪಾಲಿಸುವುದು.
- ಸ್ಪರ್ಧೆಯ ಒಳಗಿರಲಿ ಅಥವಾ ಹೊರಗಿರಲಿ ಮಾದರಿ ಸಂಗ್ರಹಕ್ಕೆ ಲಭ್ಯವಿರುವುದು.
- ಸೂಚನೆ ಬಂದ ತಕ್ಷಣ ಮಾದರಿ ಸಂಗ್ರಹಣಾ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ ಎಲ್ಲಾ ಸಮಯದಲ್ಲೂ ಡೋಪಿಂಗ್ ನಿಯಂತ್ರಣ ಅಧಿಕಾರಿ (ಡಿಸಿಒ) ಅಥವಾ ಅವರ ಸಹಾಯಕ ವ್ಯಕ್ತಿಯ ನೇರ ವೀಕ್ಷಣೆಯಲ್ಲಿ ಲಭ್ಯವಿರುವಿಕೆ.
- ಮಾದರಿ ಸಂಗ್ರಹಣಾ ಪ್ರಕ್ರಿಯೆಯ ಸಮಯದಲ್ಲಿ ವಿನಂತಿಯ ಮೇರೆಗೆ ಗುರುತಿನ ಚೀಟಿಯನ್ನು ನೀಡುವುದು.
- ಯಾವುದೇ ನಿಷೇಧಿತ ವಸ್ತು ತಮ್ಮ ದೇಹಕ್ಕೆ ಪ್ರವೇಶಿಸದಂತೆ ಮತ್ತು ತಮ್ಮ ಮೇಲೆ ಯಾವುದೇ ನಿಷೇಧಿತ ವಿಧಾನವನ್ನು ಬಳಸದಂತೆ ಖಚಿತಪಡಿಸಿಕೊಳ್ಳುವುದು.
- ಜಾರಿಯಲ್ಲಿರುವ ನಿಷೇಧಿತ ಪಟ್ಟಿಯ ಪ್ರಕಾರ ಯಾವುದೇ ಚಿಕಿತ್ಸೆಯನ್ನು ನಿಷೇಧಿಸಲಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಶಿಫಾರಸು ಮಾಡಲಾದ ವೈದ್ಯರ ಜೊತೆಗೆ ಅಥವಾ ಅಗತ್ಯವಿದ್ದರೆ ನೇರವಾಗಿ ಎಡಿಒ ಅವರ ಜೊತೆಗೆ ಪರಿಶೀಲನೆ ನಡೆಸುವುದು.
- ಅನುಮತಿಸಲಾದ ಪರ್ಯಾಯ ಚಿಕಿತ್ಸೆಯು ಸಾಧ್ಯವಾಗದಿದ್ದರೆ ಮತ್ತು ಥೆರಪೆಟಿಕ್ ಬಳಕೆ ವಿನಾಯಿತಿಯ (ಟಿಯುಇ) ಅಗತ್ಯವಿದ್ದರೆ ನಾಡಾಗೆ ಅರ್ಜಿ ಸಲ್ಲಿಸುವುದು.
- ಡೋಪಿಂಗ್ ನಿಯಂತ್ರಣಕ್ಕೆ ಆಯ್ಕೆಯಾದ ಕುರಿತು ತಿಳಿಸಿದ ತಕ್ಷಣವೇ ಮಾದರಿ ಸಂಗ್ರಹಣೆಗಾಗಿ ವರದಿ ಮಾಡುವುದು.
- ಡೋಪಿಂಗ್ ನಿಯಂತ್ರಣ ಅರ್ಜಿ (ಡಿಸಿಎಫ್) ಯಲ್ಲಿ ನಮೂದಿಸಲಾದ ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳುವುದು.

ಕ್ರೀಡಾಪಟು ಬೆಂಬಲ ಸಿಬ್ಬಂದಿಯ ಹಕ್ಕುಗಳು ಮತ್ತು ಜವಾಬ್ದಾರಿಗಳು

ಸಂಹಿತೆಯ ಅಡಿಯಲ್ಲಿ ಕ್ರೀಡಾಪಟು ಬೆಂಬಲ ಸಿಬ್ಬಂದಿ ಮತ್ತು ಇತರ ವ್ಯಕ್ತಿಗಳ ಹಕ್ಕುಗಳು ಈ ಕೆಳಗಿನ ಅಂಶಗಳನ್ನು ಒಳಗೊಂಡಿವೆ:

- ಸ್ವತಂತ್ರ ವಿಚಾರಣಾ ಸಮಿತಿಯ ಮುಂದೆ ನ್ಯಾಯಸಮ್ಮತ ವಿಚಾರಣೆಯ ಹಕ್ಕು
- ವಿಚಾರಣೆಯ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಹಕ್ಕು
- ಐಎಸ್ಪಿಪಿಐ ಮತ್ತು ಯಾವುದೇ ಅನ್ವಯವಾಗುವ ಸ್ಥಳೀಯ ಕಾನೂನಿನ ಪ್ರಕಾರ, ಡೇಟಾ ರಕ್ಷಣೆಗೆ ಸಂಬಂಧಿಸಿದ ಹಕ್ಕುಗಳು


ಸಂಹಿತೆಯಡಿಯಲ್ಲಿ ಕ್ರೀಡಾಪಟುಗಳ ಬೆಂಬಲ ಸಿಬ್ಬಂದಿ ಮತ್ತು ಇತರ ವ್ಯಕ್ತಿಗಳ ಜವಾಬ್ದಾರಿಗಳು ಈ ಕೆಳಗಿನ ಅಂಶಗಳನ್ನು ಒಳಗೊಂಡಿವೆ:

- ಕ್ರೀಡಾಪಟುಗಳ ಮೌಲ್ಯಗಳು ಮತ್ತು ವರ್ತನೆಯ ಮೇಲೆ ತಮ್ಮ ಪ್ರಭಾವವನ್ನು ಬಳಸಿಕೊಂಡು ಸ್ವಚ್ಛ ಕ್ರೀಡಾ ನಡವಳಿಕೆಗಳನ್ನು ಬೆಳೆಸುವುದು.
- ಅನ್ವಯವಾಗುವ ಎಲ್ಲಾ ಡೋಪಿಂಗ್ ತಡೆ ನೀತಿಗಳು ಮತ್ತು ನಿಯಮಗಳನ್ನು ತಿಳಿದುಕೊಳ್ಳುವುದು ಮತ್ತು ಪಾಲಿಸುವುದು.
- ಕ್ರೀಡಾಪಟುಗಳ ಡೋಪಿಂಗ್ ನಿಯಂತ್ರಣ ಪ್ರೋಗ್ರಾಂಗಳೊಂದಿಗೆ ಸಹಕರಿಸುವುದು.
- ನಾಡಾದ ಎಡಿಆರ್‌ವಿ ತನಿಖೆಗಳೊಂದಿಗೆ ಸಹಕರಿಸುವುದು.
- ಕಳೆದ 10 ವರ್ಷಗಳಲ್ಲಿ ಎಡಿಆರ್‌ವಿ ಮಾಡಿದ್ದರೆ ಸಂಬಂಧಿತ ಐಎಫ್ ಮತ್ತು/ಅಥವಾ ನಾಡಾಕ್ಕೆ ತಿಳಿಸುವುದು.
- (ನಿಷೇಧಿತ ವಸ್ತು ಅಥವಾ ವಿಧಾನವನ್ನು) ಹೊಂದುವಿಕೆಯಿಂದ ದೂರವಿರುವುದು, ಕ್ರೀಡಾಪಟುವಿಗೆ ಅಂತಹ ಯಾವುದೇ ವಸ್ತು ಅಥವಾ ವಿಧಾನವನ್ನು ನೀಡುವುದು, ಕಳ್ಳಸಾಗಣೆ, ಎಡಿಆರ್‌ವಿ ಅಥವಾ ಇತರ ಯಾವುದೇ ರೀತಿಯ ತೊಂದರೆಗಳನ್ನು ಮುಚ್ಚಿಡುವುದು ಮತ್ತು ಡೋಪಿಂಗ್ (ನಿಷೇಧಿತ ಸಂಘ) ಅಡಿಯಲ್ಲಿ ಶಿಕ್ಷೆಗೊಳಗಾದ ವ್ಯಕ್ತಿಯೊಂದಿಗೆ ಸ್ನೇಹ ಸಂಬಂಧ ಬೆಳೆಸುವುದು.



ಕಟ್ಟುನಿಟ್ಟಾದ ಜವಾಬ್ದಾರಿ ತತ್ವ

ಸ್ಪರ್ಧೆಯ ಸಮಯದಲ್ಲಿ ತಮ್ಮ ಪ್ರದರ್ಶನಕ್ಕೆ ಕ್ರೀಡಾಪಟುಗಳು ಜವಾಬ್ದಾರರಾಗಿರುತ್ತಾರೆ. ಅದೇ ರೀತಿಯಲ್ಲಿ ತಮ್ಮ ದೇಹದಲ್ಲಿ ಕಂಡುಬರುವ ಯಾವುದೇ ವಸ್ತುವಿಗೆ ಕ್ರೀಡಾಪಟುಗಳು ಜವಾಬ್ದಾರರಾಗಿರುತ್ತಾರೆ. ಕ್ರೀಡಾಪಟುಗಳು ಬಳಸುವ ಅಥವಾ ಬಳಸಲು ಪ್ರಯತ್ನಿಸುವ ಯಾವುದೇ ನಿಷೇಧಿತ ವಸ್ತು ಅಥವಾ ಯಾವುದೇ ನಿಷೇಧಿತ ವಸ್ತು ಅವರ ದೇಹದಲ್ಲಿ ಕಂಡುಬಂದರೆ, ಆ ವಸ್ತು ಹೇಗೆ ಅಲ್ಲಿಗೆ ಬಂತು ಅಥವಾ ಅವರಿಗೆ ಮೋಸ ಮಾಡುವ ಉದ್ದೇಶವಿತ್ತೇ ಇಲ್ಲವೇ ಎಂಬುದನ್ನು ಲೆಕ್ಕಿಸದೆ, ಕ್ರೀಡಾಪಟುಗಳೇ ಅದಕ್ಕೆ ಜವಾಬ್ದಾರರಾಗಿರುತ್ತಾರೆ. ಆದ್ದರಿಂದ, ಕ್ರೀಡಾಪಟುಗಳು ಕ್ರೀಡೆಯಲ್ಲಿ ನಿಷೇಧಿಸಲಾದ ವಸ್ತು ಮತ್ತು ವಿಧಾನಗಳು ಹಾಗೂ ತಮ್ಮನ್ನು ತಾವು ಹೇಗೆ ರಕ್ಷಿಸಿಕೊಳ್ಳಬೇಕೆಂದು ತಿಳಿದುಕೊಳ್ಳಬೇಕು.



ಡೋಪಿಂಗ್‌ನ
ಪರಿಣಾಮಗಳು

ಎಡಿಆರ್‌ವಿ ಮಾಡುವ ಯಾವುದೇ ವ್ಯಕ್ತಿಯು ಕ್ರೀಡೆಯಿಂದ ನಿಷೇಧವನ್ನು ಎದುರಿಸಬೇಕಾಗುತ್ತದೆ ಆದರೆ ಇತರ ಪರಿಣಾಮಗಳೂ ಇವೆ.

1. ತಾತ್ಕಾಲಿಕ ಅಮಾನತು: ಫಲಿತಾಂಶ ನಿರ್ವಹಣಾ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ ಅಥವಾ ಅಂತಿಮ ನಿರ್ಧಾರ ತೆಗೆದುಕೊಳ್ಳುವವರೆಗೆ ಕ್ರೀಡಾಪಟು ಅಥವಾ ಇತರ ವ್ಯಕ್ತಿಯನ್ನು ಯಾವುದೇ ಸ್ಪರ್ಧೆ ಅಥವಾ ಚಟುವಟಿಕೆಯಲ್ಲಿ ಭಾಗವಹಿಸದೇ ಇರುವಂತೆ ತಾತ್ಕಾಲಿಕವಾಗಿ ನಿಷೇಧಿಸಲಾಗುತ್ತದೆ.

2. ಅನರ್ಹತೆ: ಕ್ರೀಡಾಪಟುಗಳು ಅಥವಾ ಇತರ ವ್ಯಕ್ತಿಗಳಿಗೆ ಎಡಿಆರ್‌ವಿ ಯಿಂದಾಗಿ ತರಬೇತಿ, ಕೋಚಿಂಗ್ ಅಥವಾ ಫಂಡಿಂಗ್ ಪ್ರವೇಶದಂತಹ ಯಾವುದೇ ಇತರ ಚಟುವಟಿಕೆಯಲ್ಲಿ ಭಾಗವಹಿಸಲು ಅಥವಾ ಯಾವುದೇ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶವಿಲ್ಲ. ಈ ಅನರ್ಹತೆಯ ಅವಧಿಯು 4 ವರ್ಷಗಳವರೆಗೆ ಅಥವಾ ಎಡಿಆರ್‌ವಿಯ ಸಂದರ್ಭಗಳನ್ನು ಅವಲಂಬಿಸಿ ಜೀವಿತಾವಧಿಯವರೆಗೆ ಇರಬಹುದು.

3. ಫಲಿತಾಂಶಗಳ ಅನರ್ಹತೆ: ನಿರ್ದಿಷ್ಟ ಅವಧಿ, ಸ್ಪರ್ಧೆ ಅಥವಾ ಘಟನೆಯಲ್ಲಿ ಕ್ರೀಡಾಪಟುವಿನ ಫಲಿತಾಂಶಗಳನ್ನು ಅಮಾನ್ಯಗೊಳಿಸಲಾಗುತ್ತದೆ, ಇದು ಯಾವುದೇ ಪದಕಗಳು, ಅಂಕಗಳು ಮತ್ತು ಬಹುಮಾನಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದನ್ನು ಒಳಗೊಳ್ಳುತ್ತದೆ.

4. ಸಾರ್ವಜನಿಕ ಬಹಿರಂಗಪಡಿಸುವಿಕೆ: ಉದ್ದೀಪನಾ ಮದ್ದು ತಡೆ ಸಂಸ್ಥೆ (ಎಡಿಒ) ಎಡಿಆರ್‌ವಿಯ ಕುರಿತು ಸಾರ್ವಜನಿಕರಿಗೆ ತಿಳಿಸುತ್ತದೆ.

5. ದಂಡಗಳು

6. ದೈಹಿಕ ಆರೋಗ್ಯದ ಪರಿಣಾಮಗಳು: ನಿರ್ದಿಷ್ಟ ಆರೋಗ್ಯ ಸ್ಥಿತಿ ಅಥವಾ ಅನಾರೋಗ್ಯಕ್ಕೆ ಚಿಕಿತ್ಸೆ ನೀಡಲು ಔಷಧಿಗಳು ಮತ್ತು ವೈದ್ಯಕೀಯ ಮಧ್ಯಂತರಗಳನ್ನು ಅಭಿವೃದ್ಧಿಪಡಿಸಲಾಗಿದೆ. ವಸ್ತು, ಡೋಸೇಜ್ ಮತ್ತು ಸೇವನೆಯ ಆವರ್ತನವನ್ನು ಅವಲಂಬಿಸಿ, ಡೋಪಿಂಗ್ ಉತ್ಪನ್ನಗಳು ಆರೋಗ್ಯದ ಮೇಲೆ ನಿರ್ದಿಷ್ಟ ದುಷ್ಪರಿಣಾಮಗಳನ್ನು ಬೀರಬಹುದು.

2. ಮಾನಸಿಕ ಆರೋಗ್ಯದ ಪರಿಣಾಮಗಳು: ಕೆಲವು ಡೋಪಿಂಗ್ ವಸ್ತುಗಳು ಕ್ರೀಡಾಪಟುವಿನ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು. ಆತಂಕ, ಅನಗತ್ಯ ಆಲೋಚನೆ, ಭಯ ಮತ್ತು ಗೀಳಿನಂತಹ ಅಸ್ವಸ್ಥತೆಗಳು ಅಥವಾ ಮನೋವಿಕಾರಗಳು ಡೋಪಿಂಗ್ನ ನೇರ ಪರಿಣಾಮಗಳಾಗಿವೆ.

8. ಸಾಮಾಜಿಕ ಪರಿಣಾಮಗಳು: ಆರ್ಥಿಕ ಪರಿಣಾಮಗಳು:

a) ಮಾಧ್ಯಮಗಳ ಗಮನಕ್ಕೆ ಬಂದರೆ ಶಾಶ್ವತವಾಗಿ ಇರಬಹುದಾದ ಖ್ಯಾತಿ ಮತ್ತು ಕೀರ್ತಿಗೆ ಆಗುವ ಹಾನಿ ಮತ್ತು ಭವಿಷ್ಯದ ಕ್ರೀಡಾಪಟುಗಳು ನೀಡುವ ಸ್ವಚ್ಛ ಪ್ರದರ್ಶನಗಳು ಸಹ ಸಂದೇಹಕ್ಕೆ ಕಾರಣವಾಗಬಹುದು.

b) ಭವಿಷ್ಯದ ವೃತ್ತಿಜೀವನದ ನಿರೀಕ್ಷೆಗಳಿಗೆ ಹಾನಿ.

c) ಗೆಳೆಯರು ಮತ್ತು ಕ್ರೀಡೆಗಳಿಂದ ಪ್ರತ್ಯೇಕವಾಗಿ ಇರಬೇಕಾದ ಸ್ಥಿತಿ.

d) ಸ್ನೇಹಿತರು ಮತ್ತು ಕುಟುಂಬದವರೊಂದಿಗಿನ ಸಂಬಂಧಗಳು ಹದಗೆಡುತ್ತವೆ.

e) ಭಾವನಾತ್ಮಕ ಮತ್ತು ಮಾನಸಿಕ ಯೋಗಕ್ಷೇಮದ ಮೇಲೆ ಪರಿಣಾಮ ಬೀರುತ್ತದೆ.

f) ಖ್ಯಾತಿ, ಗೌರವ ಮತ್ತು ವಿಶ್ವಾಸಾರ್ಹತೆಯ ನಷ್ಟ.

9. ಆರ್ಥಿಕ ಪರಿಣಾಮಗಳು:

a) ಎಡಿಆರ್ವಿಗೆ ಸಂಬಂಧಿಸಿದ ವೆಚ್ಚಗಳು ಸೇರಿದಂತೆ, ಉದ್ದೀಪನಾ ಮದ್ದು ತಡೆ ಸಂಸ್ಥೆ (ಎಡಿಒ) ತಮ್ಮ ಡೋಪಿಂಗ್ ತಡೆ ನಿಯಮಗಳಲ್ಲಿ ಸೇರಿಸಬಹುದಾದ ದಂಡಗಳು.

b) ಸರ್ಕಾರದಿಂದ ಬರಬಹುದಾದ ಧನಸಹಾಯ, ಇತರ ರೀತಿಯ ಆರ್ಥಿಕ ನೆರವು ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸದೇ ಇರುವುದರಿಂದ, ಬರುವ ಆದಾಯ/ಆರ್ಥಿಕ ಬೆಂಬಲದ ನಷ್ಟ.

c) ಪ್ರಾಯೋಜಕರು ಹಿಂತೆಗೆದುಕೊಳ್ಳುವ ಕಾರಣದಿಂದ ಉಂಟಾಗುವ ಆರ್ಥಿಕ ಬೆಂಬಲದ ನಷ್ಟ.

d) ಒಪ್ಪಂದದಲ್ಲಿ ಒಳಗೊಳ್ಳದೇ ಇದ್ದರೆ, ಪ್ರಾಯೋಜಕರಿಗೆ ಮರುಪಾವತಿ ಮಾಡಬೇಕಾದ ಅವಶ್ಯಕತೆ.

e) ಬಹುಮಾನದ ಹಣವನ್ನು ಮರುಪಾವತಿ ಮಾಡುವ ಅವಶ್ಯಕತೆ.

f) ಅಪಖ್ಯಾತಿಯು ಭವಿಷ್ಯದ ವೃತ್ತಿ ಜೀವನದ ನಿರೀಕ್ಷೆಯ ಮೇಲೆ ಪರಿಣಾಮ ಬೀರುತ್ತದೆ.

10. ಕಾನೂನು ಪರಿಣಾಮಗಳು:

a) ಕೆಲವು ದೇಶಗಳು ವಿಶ್ವ ಡೋಪಿಂಗ್ ತಡೆ ಸಂಹಿತೆಯನ್ನು ಮೀರಿ ನಿಷೇಧಿತ ವಸ್ತುವನ್ನು ಬಳಸಿದರೆ ಕ್ರಿಮಿನಲ್ ಅಪರಾಧವೆಂದು ಪರಿಗಣಿಸುತ್ತವೆ (ಉದಾ. ಆಸ್ಟ್ರಿಯಾ, ಇಟಲಿ, ಫ್ರಾನ್ಸ್)

b) ಕೆಲವು ದೇಶಗಳಲ್ಲಿ ನಿಷೇಧಿತ ವಸ್ತು ಅಥವಾ ನಿಷೇಧಿತ ಪಟ್ಟಿಯಲ್ಲಿರುವ ಕೆಲವು ಪದಾರ್ಥಗಳ ಸಾಗಣೆ, ಸ್ವಾಧೀನಪಡಿಸಿಕೊಳ್ಳುವಿಕೆ ಅಥವಾ ಆಡಳಿತಕ್ಕೆ ಸಂಬಂಧಿಸಿ ಎಡಿಆರ್ವಿಗಳನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸಲಾಗುತ್ತದೆ.

ಡೋಪಿಂಗ್ ತಡೆ
ನಿಯಮದ ಉಲ್ಲಂಘನೆಗಳು

ಡೋಪಿಂಗ್ ಕೇವಲ ಪಾಸಿಟಿವ್ ಪರೀಕ್ಷೆಯಲ್ಲ. ಇದನ್ನು ಈ ಕೆಳಗಿನ ಒಂದು ಅಥವಾ ಹೆಚ್ಚಿನ ಡೋಪಿಂಗ್ ತಡೆ ನಿಯಮ ಉಲ್ಲಂಘನೆ (ಎಡಿಆರ್‌ವಿಗಳು) ಎಂದು ವ್ಯಾಖ್ಯಾನಿಸಲಾಗಿದ್ದು, ನಾಡಾ ರಾಷ್ಟ್ರೀಯ ಡೋಪಿಂಗ್ ತಡೆ ನಿಯಮಗಳು, 2021 ರ ಪ್ರಕಾರ 11 ವಿಧದ ಎಡಿಆರ್‌ವಿಗಳೆಂದು ವಿಂಗಡಿಸಲಾಗಿದೆ.

ಎನ್‌ಎಡಿಆರ್-ಆರ್ಟಿಕಲ್ ಸಂಖ್ಯೆ	ಉಲ್ಲಂಘನೆಯ ವಿಧಗಳು	ಈ ಕೆಳಗಿನ ವ್ಯಕ್ತಿಗಳಿಗೆ ಅನ್ವಯಿಸುತ್ತದೆ
2.1	ಕ್ರೀಡಾಪಟುವಿನ ಮಾದರಿಯಲ್ಲಿ ನಿಷೇಧಿತ ವಸ್ತುವಿನ ಉಪಸ್ಥಿತಿ.	ಕ್ರೀಡಾಪಟುಗಳಿಗೆ ಮಾತ್ರ
2.2	ನಿಷೇಧಿತ ವಸ್ತುವನ್ನು ಕ್ರೀಡಾಪಟುವು ಬಳಸಿರುವುದು ಅಥವಾ ಬಳಸಲು ಪ್ರಯತ್ನಿಸಿರುವುದು.	ಕ್ರೀಡಾಪಟುಗಳಿಗೆ ಮಾತ್ರ
2.3	ಮಾದರಿ ಸಂಗ್ರಹಕ್ಕೆ ಒಳಗಾಗದಂತೆ ನುಣುಚಿಕೊಳ್ಳುವುದು, ನಿರಾಕರಿಸುವುದು ಅಥವಾ ಮಾದರಿ ಸಲ್ಲಿಕೆಗೆ ವಿಫಲವಾಗುವುದು.	ಕ್ರೀಡಾಪಟುಗಳಿಗೆ ಮಾತ್ರ
2.4	ನೋಂದಾಯಿತ ಪರೀಕ್ಷಾ ಗುಂಪಿನಲ್ಲಿ ಕ್ರೀಡಾಪಟುವು 12 ತಿಂಗಳ ಅವಧಿಯೊಳಗೆ ಮೂರು ಪರೀಕ್ಷೆಗಳನ್ನು ತಪ್ಪಿಸಿಕೊಳ್ಳುವುದು ಮತ್ತು/ಅಥವಾ ಸಲ್ಲಿಸಿದ ವೈಫಲ್ಯಗಳ ಸಂಯೋಜನೆಯನ್ನು ಸಂಪೂರ್ಣ ವೈಫಲ್ಯಗಳು ಎಂದು ಪರಿಗಣಿಸಲಾಗುತ್ತದೆ.	ಕ್ರೀಡಾಪಟುಗಳಿಗೆ ಮಾತ್ರ
2.5	ಡೋಪಿಂಗ್ ನಿಯಂತ್ರಣದ ಯಾವುದೇ ಭಾಗವನ್ನು ತಿರುಚುವುದು ಅಥವಾ ತಿರುಚಲು ಪ್ರಯತ್ನಿಸುವುದು.	ಕ್ರೀಡಾಪಟುಗಳು, ಕ್ರೀಡಾಪಟುಗಳ ಬೆಂಬಲ ಸಿಬ್ಬಂದಿ ಮತ್ತು ಇತರ ವ್ಯಕ್ತಿಗಳು
2.6	ನಿಷೇಧಿತ ವಸ್ತು ಅಥವಾ ನಿಷೇಧಿತ ವಿಧಾನವನ್ನು ಬಳಸುವುದು.	ಕ್ರೀಡಾಪಟುಗಳು, ಕ್ರೀಡಾಪಟುಗಳ ಬೆಂಬಲ ಸಿಬ್ಬಂದಿ
2.7	ಯಾವುದೇ ನಿಷೇಧಿತ ವಸ್ತು ಅಥವಾ ನಿಷೇಧಿತ ವಿಧಾನದಲ್ಲಿ ಸಾಗಣೆ ಮಾಡುವುದು ಅಥವಾ ಸಾಗಣೆಗೆ ಪ್ರಯತ್ನಿಸುವುದು.	ಕ್ರೀಡಾಪಟುಗಳು, ಕ್ರೀಡಾಪಟುಗಳ ಬೆಂಬಲ ಸಿಬ್ಬಂದಿ ಮತ್ತು ಇತರ ವ್ಯಕ್ತಿಗಳು



2.8	ಯಾವುದೇ ಕ್ರೀಡಾಪಟುವಿಗೆ ಯಾವುದೇ ನಿಷೇಧಿತ ವಸ್ತು ಅಥವಾ ನಿಷೇಧಿತ ವಿಧಾನವನ್ನು ನೀಡುವುದು ಅಥವಾ ನೀಡಲು ಪ್ರಯತ್ನಿಸುವುದು.	ಕ್ರೀಡಾಪಟುಗಳು, ಕ್ರೀಡಾಪಟುಗಳ ಬೆಂಬಲ ಸಿಬ್ಬಂದಿ
2.9	ಎಡಿಆರ್‌ವಿ ಅಥವಾ ಯಾವುದೇ ಪ್ರಯತ್ನಪಟ್ಟ ಎಡಿಆರ್‌ವಿ ಒಳಗೊಂಡ ಉದ್ದೇಶಪೂರ್ವಕ ತೊಡಕು ಅಥವಾ ತೊಂದರೆಗಳಿಗೆ ಸಹಾಯ ಮಾಡುವುದು, ಪ್ರೋತ್ಸಾಹಿಸುವುದು, ಉತ್ತೇಜಿಸುವುದು, ಪಿತೂರಿ ನಡೆಸುವುದು ಅಥವಾ ಅವುಗಳನ್ನು ಮುಚ್ಚಿಡುವುದು.	ಕ್ರೀಡಾಪಟುಗಳು, ಕ್ರೀಡಾಪಟು ಬೆಂಬಲ ಸಿಬ್ಬಂದಿ ಮತ್ತು ಇತರ ವ್ಯಕ್ತಿಗಳು
2.10	ನಿಷೇಧಿತ ಶಿಕ್ಷೆಗೆ ಒಳಗಾಗಿರುವ ಅಥವಾ ಡೋಪಿಂಗ್ ಉಲ್ಲಂಘನೆಗೆ ಸಮಾನವಾದ ಕ್ರಿಮಿನಲ್ ಅಥವಾ ಶಿಸ್ತಿನ ಅಪರಾಧದಲ್ಲಿ ತಪ್ಪಿತಸ್ಥರೆಂದು ಕಂಡುಬಂದ ಕೋಚ್, ವೈದ್ಯರು, ಫಿಸಿಯೋ ಅಥವಾ ತರಬೇತುದಾರ ವ್ಯಕ್ತಿಯೊಂದಿಗೆ ವೃತ್ತಿಪರ ಅಥವಾ ಕ್ರೀಡಾ ಸಂಬಂಧಿತ ವಿಷಯಗಳಲ್ಲಿ ಸಂಬಂಧವನ್ನು ಹೊಂದಿರುವುದು.	ಕ್ರೀಡಾಪಟುಗಳು, ಕ್ರೀಡಾಪಟುಗಳ ಬೆಂಬಲ ಸಿಬ್ಬಂದಿ ಮತ್ತು ಇತರ ವ್ಯಕ್ತಿಗಳು
2.11	ಡೋಪಿಂಗ್ ಬಗ್ಗೆ ಮಾಹಿತಿಯನ್ನು ಯಾರಲ್ಲೂ ಹಂಚಿಕೊಳ್ಳದಂತೆ ಇನ್ನೊಬ್ಬರನ್ನು ಬೆದರಿಸುವ ಅಥವಾ ಬೆದರಿಸಲು ಪ್ರಯತ್ನಿಸುವ ಕೃತ್ಯಗಳು (ಇದನ್ನು ವಿಷಲ್ ಬ್ಲೋವರ್ ಎಂದೂ ಕರೆಯಲಾಗುತ್ತದೆ), ಅಥವಾ ಹಂಚಿಕೊಂಡಿದ್ದಕ್ಕಾಗಿ ಇನ್ನೊಬ್ಬರ ವಿರುದ್ಧ ಸೇಡು ತೀರಿಸಿಕೊಳ್ಳುವುದು.	ಕ್ರೀಡಾಪಟುಗಳು, ಕ್ರೀಡಾಪಟುಗಳ ಬೆಂಬಲ ಸಿಬ್ಬಂದಿ ಮತ್ತು ಇತರ ವ್ಯಕ್ತಿಗಳು



ಕ್ರೀಡೆಯಲ್ಲಿ ನಿಷೇಧಿತ ವಸ್ತುಗಳು ಮತ್ತು ವಿಧಾನಗಳನ್ನು ಅರ್ಥಮಾಡಿಕೊಳ್ಳುವುದು

ನಿಷೇಧಿತ ವಸ್ತುಗಳು ಮತ್ತು ವಿಧಾನಗಳನ್ನು ನಿಷೇಧಿತ ಪಟ್ಟಿಯಲ್ಲಿ (ಪಟ್ಟಿ) ಸೇರಿಸಲಾಗಿದೆ. ವಿಶ್ವ ಉದ್ದೀಪನಮದ್ದು ತಡೆ ಸಂಸ್ಥೆ (ವಾಡಾ) ವಾರ್ಷಿಕವಾಗಿ ನಿಷೇಧಿತ ಪಟ್ಟಿಯನ್ನು ಪ್ರಕಟಿಸುತ್ತದೆ, ಇದು ಕ್ರೀಡೆಯಲ್ಲಿ ನಿಷೇಧಿಸಲಾದ ವಸ್ತುಗಳು ಮತ್ತು ವಿಧಾನಗಳನ್ನು ಗುರುತಿಸುತ್ತದೆ. ಪ್ರತಿ ವರ್ಷದ ಅಕ್ಟೋಬರ್‌ನಲ್ಲಿ ವಾಡಾ ಮುಂದಿನ ವರ್ಷಕ್ಕೆ ನವೀಕರಿಸಿದ ನಿಷೇಧಿತ ಪಟ್ಟಿಯನ್ನು ಪ್ರಕಟಿಸುತ್ತದೆ. ಈ ಪಟ್ಟಿ ಮುಂಬರುವ ವರ್ಷದ ಜನವರಿ 1 ರಂದು ಜಾರಿಗೆ ಬರುತ್ತದೆ.

ಈ ಪಟ್ಟಿಯು ಎಲ್ಲಾ ಸಮಯದಲ್ಲೂ ಅನ್ವಯವಾಗುತ್ತದೆ.

ಪಟ್ಟಿಯು ಕೆಳಕಂಡ ವಸ್ತುಗಳು ಮತ್ತು ವಿಧಾನಗಳನ್ನು ಹೊಂದಿರುತ್ತದೆ:

- ಎಲ್ಲಾ ಸಮಯದಲ್ಲೂ ನಿಷೇಧಿಸಲಾದವುಗಳು (ಸ್ಪರ್ಧೆಯೊಳಗೆ ಮತ್ತು ಸ್ಪರ್ಧೆಯ ಹೊರಗೆ ಎರಡೂ)
- ಸ್ಪರ್ಧೆಯೊಳಗೆ ಮಾತ್ರ ನಿಷೇಧಿಸಲಾದವುಗಳು
- ನಿರ್ದಿಷ್ಟ ಕ್ರೀಡೆಗಳಲ್ಲಿ (ಆರ್ಚರಿ, ಗಾಲ್ಫ್ ಮತ್ತು ಶೂಟಿಂಗ್) ನಿಷೇಧಿಸಲಾದವುಗಳು
- ಪರತ್ತುಬದ್ಧ - ಕ್ರೀಡಾಪಟುಗಳಿಗೆ ನಿರ್ದಿಷ್ಟ ಡೋಸ್ಗಳಿಗೆ ಅಥವಾ ನಿರ್ದಿಷ್ಟ ಡೋಸೇಜ್ ವ್ಯಾಪ್ತಿಯೊಳಗೆ ತೆಗೆದುಕೊಳ್ಳಲು ಅನುಮತಿಸಲಾಗಿದೆ ಆದರೆ ಆ ಡೋಸ್ ಅಥವಾ ವ್ಯಾಪ್ತಿಯ ಹೊರಗೆ ನಿಷೇಧಿಸಲಾದವುಗಳು (ಉದಾಹರಣೆಗೆ, ಆಸ್ತಮಾ ಇನ್ಹೇಲರ್‌ಗಳಲ್ಲಿ ಕಂಡುಬರುವ ಕೆಲವು ಪದಾರ್ಥಗಳು). ಇತರ ಪರತ್ತುಬದ್ಧ ವಸ್ತುಗಳು ಅವುಗಳನ್ನು ತೆಗೆದುಕೊಳ್ಳುವ ವಿಧಾನದಿಂದ (ಸೇವನೆ ವಿಧಾನ) ಮಾತ್ರ ನಿಷೇಧಿಸಲ್ಪಟ್ಟಿರುತ್ತವೆ, ಉದಾಹರಣೆಗೆ, ಕ್ರೀಮ್ ರೂಪದಲ್ಲಿ ಅನ್ವಯಿಸುವುದು, ಅಥವಾ ಸೇವಿಸುವುದು ಅಥವಾ ಉಸಿರಿನೊಂದಿಗೆ ಸೇರುವುದು.

ಅಧಿಕೃತ ಪಟ್ಟಿಯನ್ನು ವಾಡಾ ವೆಬ್‌ಸೈಟ್: www.wada-ama.org ನಾಡಾದ ವೆಬ್‌ಸೈಟ್: https://nadaindia.yas.gov.in/ ನಲ್ಲಿ ಪ್ರಕಟಿಸಲಾಗಿದೆ.

ನೀವು ನೆನಪಿನಲ್ಲಿಟ್ಟುಕೊಳ್ಳಬೇಕಾದ ಕೆಲವು ಪ್ರಮುಖ ವಿಷಯಗಳನ್ನು ಕೆಳಗೆ ನೀಡಲಾಗಿದೆ:

ಕ್ರೀಡಾಪಟುವಿನ ಔಷಧವು ನಿಷೇಧಿತ ವಸ್ತುವನ್ನು ಒಳಗೊಂಡಿರಬಹುದು. ಯಾವುದೇ ಔಷಧವನ್ನು ಬಳಸುವ ಮೊದಲು ಯಾವಾಗಲೂ ವೈದ್ಯಕೀಯ ಸಲಹೆಯನ್ನು ಪಡೆಯಿರಿ ಮತ್ತು ಅದು ವಾಡಾ ನಿಷೇಧಿಸಿರುವ ವಸ್ತುಗಳನ್ನು ಹೊಂದಿದೆಯೇ ಎಂದು ಪರಿಶೀಲಿಸಿ.

• ಭಾರತದಲ್ಲಿ ಸ್ಪರ್ಧಿಸುವ ಕ್ರೀಡಾಪಟುಗಳಿಗೆ, ನಾಡಾದ ನೋ ಯುವರ್ ಮೆಡಿಸಿನ್ (ಕೆವೈಎಂ) ಆ್ಯಪ್ ಔಷಧಗಳ ಸ್ಥಿತಿಯನ್ನು ಪರಿಶೀಲಿಸಲು ಸಹಾಯಕ ಸಾಧನವಾಗಿದೆ: https://kym.nadaindia.yas.gov.in ಇದು ಗೂಗಲ್ ಪ್ಲೇ ಸ್ಟೋರ್ನಲ್ಲಿಯೂ ಲಭ್ಯವಿದೆ

• ಭಾರತದ ಹೊರಗಿನ ಪ್ರಮುಖ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳು, ವಾಡಾ-ಅನುಮೋದಿತ ಅಂತರರಾಷ್ಟ್ರೀಯ ಪರಿಕರಗಳನ್ನು ಬಳಸಿ: ಜಾಗತಿಕ ಡಿಆರ್ಓ (ಔಷಧ ಉಲ್ಲೇಖ ಆನ್ಲೈನ್): www.globaldro.com ಇದನ್ನು ಯುಕೆ, ಕೆನಡಾ, ಯುಎಸ್ಎ, ಸ್ವಿಟ್ಜರ್ಲೆಂಡ್ ಮತ್ತು ಇತರ ದೇಶಗಳು ಸೇರಿದಂತೆ ಹಲವಾರು ದೇಶಗಳು ಬಳಸುತ್ತವೆ.

• ಸ್ಥಳೀಯ ಔಷಧ ಮಾರ್ಗದರ್ಶನಕ್ಕಾಗಿ ಆತಿಥೇಯ ದೇಶದ ಡೋಪಿಂಗ್ ತಡೆ ಏಜೆನ್ಸಿ ಅಥವಾ ಕಾರ್ಯಕ್ರಮ ಆಯೋಜಕರನ್ನು ಸಂಪರ್ಕಿಸಿ.

• ಅಗತ್ಯವಿದ್ದರೆ, ಸಂಬಂಧಿತ ಪ್ರಾಧಿಕಾರದಿಂದ ಮುಂಚಿತವಾಗಿ ಅನುಮೋದಿಸಲಾದ ಚಿಕಿತ್ಸಕ ಬಳಕೆಯ ವಿನಾಯಿತಿ (ಟಿಯುಇ) ಅನ್ನು ಯಾವಾಗಲೂ ಒಯ್ಯಿರಿ.

• ವಸ್ತುವನ್ನು ಯಾವಾಗ ಸೇವಿಸಲಾಗಿದೆ ಎನ್ನುವುದು ಮುಖ್ಯವಲ್ಲ. ಸ್ಪರ್ಧೆಯಲ್ಲಿ ಮಾತ್ರ ನಿಷೇಧಿಸಲಾದ ವಸ್ತುವನ್ನು ಸ್ಪರ್ಧೆ ಇಲ್ಲದಿರುವಾಗ ಸೇವಿಸಿದರೆ, ಅದು ಇನ್ನೂ ಕ್ರೀಡಾಪಟುವಿನ ದೇಹದಲ್ಲಿದ್ದರೆ ಮತ್ತು ಅವರು ಸ್ಪರ್ಧೆಗೆ ಸಂಬಂಧಿಸಿದ ಪರೀಕ್ಷೆಗೆ ಆಯ್ಕೆಯಾದರೆ ಅದು ಧನಾತ್ಮಕ ಪರೀಕ್ಷಾ ಫಲಿತಾಂಶಕ್ಕೆ ಕಾರಣವಾಗಬಹುದು.

• ತಾಯ್ನಾಡಿನಿಂದ ಆತಿಥೇಯ ದೇಶಕ್ಕೆ ತರಲಾದ ಯಾವುದೇ ಔಷಧಗಳಿಗೆ ಸಂಬಂಧಿಸಿದ ಕಸ್ಟಮ್ಸ್ ಸಲಹೆಯನ್ನು ಪರಿಶೀಲಿಸಿ. ಈ ಮಾಹಿತಿಯನ್ನು ಸಾಮಾನ್ಯವಾಗಿ ಕ್ರೀಡಾಕೂಟದ ಸಂಘಟನಾ ಸಮಿತಿಯು ಒದಗಿಸುವ ಕಸ್ಟಮ್ಸ್ ಮತ್ತು ಸರಕು ಸಾಗಣೆ ಮಾರ್ಗದರ್ಶಿಯಲ್ಲಿ ಒದಗಿಸಲಾಗುತ್ತದೆ. ನಿಮಗೆ ಖಚಿತವಿಲ್ಲದಿದ್ದರೆ, ನಿಮ್ಮ ಭಾರತೀಯ ಒಲಿಂಪಿಕ್ ಸಂಘವನ್ನು (ಐಒಎ) ವಿಚಾರಿಸಿ.

ನೀವು ತೆಗೆದುಕೊಳ್ಳುತ್ತಿರುವ ಯಾವುದೇ ಔಷಧಗಳ ಬಗ್ಗೆ ನಿಮ್ಮ ತಂಡದ ವೈದ್ಯರು ನಿಮಗೆ ಸಲಹೆ ನೀಡುವ ಸಾಧ್ಯತೆಯಿರುವುದರಿಂದ, ಅವರಿಗೆ ಮಾಹಿತಿ ನೀಡುವುದನ್ನು ಮರೆಯಬೇಡಿ.

ಪೂರಕ ಬಳಕೆಗೆ ಸಂಬಂಧಿಸಿದ ಅಪಾಯಗಳು

ಪೌಷ್ಟಿಕ ಪೂರಕಗಳು ಆಹಾರಕ್ರಮಕ್ಕೆ ಪೂರಕವಾಗಿ ಉದ್ದೇಶಿಸಲಾದ ಉತ್ಪನ್ನಗಳಾಗಿವೆ, ಇವು ವಿಟಮಿನ್ಗಳು, ಖನಿಜಗಳು, ಅಮೈನೋ ಆಮ್ಲಗಳು, ಹರ್ಬ್ಗಳು ಅಥವಾ ಇತರ ಬೊಟಾನಿಕಲ್ಗಳಂತಹ ಒಂದು ಅಥವಾ ಹೆಚ್ಚಿನ ಆಹಾರ ಘಟಕಾಂಶಗಳನ್ನು ಹೊಂದಿರುತ್ತವೆ. ಅವು ಕ್ಯಾಪ್ಸ್ಯೂಲ್ಗಳು, ಮಾತ್ರೆಗಳು, ಪುಡಿಗಳು, ದ್ರವಗಳು ಅಥವಾ ಮೃದುವಾದ ಜೆಲ್ಗಳಂತಹ ವಿವಿಧ ರೂಪಗಳಲ್ಲಿರುತ್ತವೆ ಮತ್ತು ಹೆಚ್ಚುವರಿ ಪೋಷಕಾಂಶಗಳನ್ನು ಒದಗಿಸುತ್ತವೆ.

ಪೂರಕಗಳನ್ನು ಬಳಸುವುದು ಅಪಾಯಗಳಿಗೆ ಕಾರಣವಾಗಬಹುದು.

ಆಹಾರ ಪೂರಕಗಳು ನಿಷೇಧಿತ ವಸ್ತುಗಳನ್ನು ಹೊಂದಿರುವ ಸಾಧ್ಯತೆಯಿದ್ದು, ಅದರಿಂದಾಗಿ ಕ್ರೀಡಾಪಟುಗಳು ಉದ್ದೇಶವಿಲ್ಲದಿದ್ದರೂ ಎಡಿಆರ್ವಿ ಅನ್ನು ಮಾಡುವ ಮತ್ತು ಅವರ ಕ್ರೀಡೆಗಳಿಂದ ನಿಷೇಧಿತರಾಗುವುದಕ್ಕೆ ಕಾರಣವಾಗಬಹುದು.

ಪೂರಕಗಳು:


- ನಿಷೇಧಿತ ವಸ್ತುವನ್ನು ಹೊಂದಿರಬಹುದು
- ಉತ್ಪಾದನಾ ಪ್ರಕ್ರಿಯೆಯ ಸಮಯದಲ್ಲಿ ನಿಷೇಧಿತ ವಸ್ತುವಿನಿಂದ ಕಲುಷಿತಗೊಂಡಿರಬಹುದು
- ಪಟ್ಟಿಯಲ್ಲಿ ನೀಡಿರುವುದಕ್ಕಿಂತ ವಿಭಿನ್ನವಾಗಿ ಹೆಸರಿಸಲಾದ ಘಟಕಾಂಶಗಳನ್ನು ಹೊಂದಿರಬಹುದು
- "ವಾಡಾ ಅನುಮೋದಿತ" ಅಥವಾ "ಕ್ರೀಡಾಪಟುಗಳಿಗೆ ಸುರಕ್ಷಿತ" ಎಂಬಂತಹ ಸುಳ್ಳು ಹಕ್ಕುಗಳನ್ನು ಮಾಡಿರಬಹುದು
- ಲೇಬಲ್ಗಳಲ್ಲಿ ಕೆಲವು ಘಟಕಾಂಶಗಳನ್ನು ಸೇರಿಸಿಲ್ಲದಿರಬಹುದು
- ಇಂಟರ್ನೆಟ್ನಲ್ಲಿ ನಕಲಿ ಉತ್ಪನ್ನಗಳಾಗಿ ಮಾರಾಟವಾಗುತ್ತಿರಬಹುದು
- ಕ್ರೀಡಾಪಟುಗಳು ಪೂರಕ ಬಳಕೆಗೆ ಸಂಬಂಧಿಸಿದ ಅಪಾಯಗಳು ಮತ್ತು ಈ ಅಪಾಯಗಳನ್ನು ಹೇಗೆ ಕಡಿಮೆ ಮಾಡುವುದು ಎಂಬುದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು
- ಬ್ಯಾಚ್-ಪರೀಕ್ಷೆಗೆ ಒಳಪಡದ ಪೂರಕಗಳು ಆಕಸ್ಮಿಕ ಡೋಪಿಂಗ್ ಅಪಾಯವನ್ನು ಹೆಚ್ಚಿಸುತ್ತವೆ
  ಕ್ರೀಡಾಪಟುಗಳು ಪೂರಕವನ್ನು ಬಳಸುವ ಮೊದಲು ಆಮೂಲಾಗ್ರ ಪರಿಶೀಲನೆಯನ್ನು ಮಾಡಬೇಕು.



ಕ್ರೀಡಾಪಟುಗಳಿಗೆ ಶಿಫಾರಸುಗಳು:

ಈ ಅಪಾಯಗಳನ್ನು ಕಡಿಮೆ ಮಾಡಲು, ಕ್ರೀಡಾಪಟುಗಳು ಕೆಳಕಂಡ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು:

- ವೃತ್ತಿಪರರನ್ನು ಸಂಪರ್ಕಿಸಿ: ಯಾವುದೇ ಪೂರಕ ಪಥ್ಯ ಕ್ರಮಗಳನ್ನು ಪ್ರಾರಂಭಿಸುವ ಮೊದಲು ಯಾವಾಗಲೂ ವೈದ್ಯರು, ಪೌಷ್ಟಿಕತಜ್ಞರು ಅಥವಾ ಆರೋಗ್ಯದಾತರೊಂದಿಗೆ ಸಮಾಲೋಚಿಸಿ.
- ಎಚ್ಚರಿಕೆಯಿಂದ ಲೇಬಲ್ ಅನ್ನು ಪರಿಶೀಲಿಸಿ: ವಾಡಾ ಒದಗಿಸಿರುವ ಪ್ರಸ್ತುತ ನಿಷೇಧಿತ ವಸ್ತುಗಳ ಪಟ್ಟಿಯಲ್ಲಿ ಪಟ್ಟಿ ಮಾಡಲಾದ ಎಲ್ಲಾ ಘಟಕಾಂಶಗಳನ್ನು ಸಂಪೂರ್ಣವಾಗಿ ಓದಿ ಮತ್ತು ಮರುಪರಿಶೀಲಿಸಿ.
- ತೃತೀಯ ಕಕ್ಷಿ ಪ್ರಮಾಣೀಕರಣ: ಲೇಬಲ್ನಲ್ಲಿ ವಿಶ್ವಾಸಾರ್ಹ ತೃತೀಯ ಕಕ್ಷಿ ಪ್ರಮಾಣೀಕರಣವನ್ನು ಪರಿಶೀಲಿಸಿ
- ಡೋಸೇಜ್ ಮಾರ್ಗಸೂಚಿಗಳನ್ನು ಅನುಸರಿಸಿ: ಶಿಫಾರಸು ಮಾಡಲಾದ ಡೋಸೇಜ್ಗಳನ್ನು ತೆಗೆದುಕೊಳ್ಳಿ ಮತ್ತು ಅತಿಯಾದ ಸೇವನೆಯನ್ನು ಮಾಡಬೇಡಿ.
- ಬಳಕೆಯನ್ನು ನಿಲ್ಲಿಸಿ: ಸಾಧ್ಯವಾದರೆ, ಪೂರಕವನ್ನು ಬಳಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿ.
- ಆನ್ಲೈನ್ ಖರೀದಿಗಳನ್ನು ಮಾಡಬೇಡಿ: ನಕಲಿ ಉತ್ಪನ್ನಗಳನ್ನು ಸ್ವೀಕರಿಸುವ ಅಪಾಯವನ್ನು ಕಡಿಮೆ ಮಾಡಲು ಆನ್ಲೈನ್ನಲ್ಲಿ ಪೂರಕಗಳನ್ನು ಖರೀದಿಸಬೇಡಿ.
- ಅನುಮಾನಾಸ್ಪದ ಘಟಕಾಂಶಗಳ ಬಗ್ಗೆ ಎಚ್ಚರದಿಂದಿರಿ: ಸಂಖ್ಯಾತ್ಮಕ ಮತ್ತು ಗ್ರೀಕ್ ಅಕ್ಷರ ಸಂಯೋಜನೆಗಳು ಅಥವಾ ನಿರ್ದಿಷ್ಟ ಪ್ರತ್ಯಯಗಳನ್ನು ಹೊಂದಿರುವಂತಹ ಕೆಲವು ಘಟಕಾಂಶಗಳನ್ನು ಹೊಂದಿರುವ ಪೂರಕಗಳ ಬಗ್ಗೆ ಜಾಗರೂಕರಾಗಿರಿ.



ನೀವು ಪೂರಕವನ್ನು ಬಳಸುತ್ತಿದ್ದರೆ

1. ಸ್ವಲ್ಪ ಪ್ರಮಾಣವನ್ನು ಇಟ್ಟುಕೊಳ್ಳಿ - ನಿಮ್ಮ ಪರೀಕ್ಷಾ ಫಲಿತಾಂಶ ಪಾಸಿಟಿವ್ ಎಂದು ಕಂಡುಬಂದರೆ, ನಿಮ್ಮ ಉಳಿದ ಮಾದರಿ ಕಲುಷಿತವಾಗಿದೆಯೇ ಎಂದು ವೈಜ್ಞಾನಿಕವಾಗಿ ಪರೀಕ್ಷಿಸುವ ಆಯ್ಕೆಯನ್ನು ನೀವು ಹೊಂದಿರುತ್ತೀರಿ.

2. ಬ್ಯಾಚ್-ಟೆಸ್ಟ್ ಪ್ರಮಾಣಪತ್ರವನ್ನು ಇಟ್ಟುಕೊಳ್ಳಿ - ನೀವು ಪೂರಕವನ್ನು ತೆಗೆದುಕೊಂಡರೆ, ಬ್ಯಾಚ್-ಟೆಸ್ಟ್ ಮಾಡಿದ ಉತ್ಪನ್ನವನ್ನು ಆಯ್ಕೆ ಮಾಡುವ ಮೂಲಕ ನಿಮ್ಮ ಅಪಾಯವನ್ನು ಕಡಿಮೆ ಮಾಡಿ.

3. ರಶೀದಿಯಂತಹ ಖರೀದಿಯ ಪುರಾವೆಯನ್ನು ಇಟ್ಟುಕೊಳ್ಳಿ
ನೈಸರ್ಗಿಕವಾಗಿ ದೊರೆಯುವ ಪೌಷ್ಟಿಕ ಆಹಾರವು ಅದಕ್ಕೆ ಪರ್ಯಾಯವಲ್ಲ. ಸರಿಯಾದ ಸಮಯದಲ್ಲಿ, ಸರಿಯಾದ ಪ್ರಮಾಣದಲ್ಲಿ, ಸೂಕ್ತವಾದ ಆಹಾರವನ್ನು ಸೇವಿಸುವುದು ಉತ್ತಮವಾಗಿದೆ.

ನೈಸರ್ಗಿಕವಾಗಿ ದೊರೆಯುವ ಪೌಷ್ಟಿಕ ಆಹಾರವು ಅದಕ್ಕೆ ಪರ್ಯಾಯವಲ್ಲ. ಸರಿಯಾದ ಸಮಯದಲ್ಲಿ, ಸರಿಯಾದ ಪ್ರಮಾಣದಲ್ಲಿ ಸೂಕ್ತವಾದ ಆಹಾರವನ್ನು ಸೇವಿಸುವುದು ಉತ್ತಮವಾಗಿದೆ.




ಔಷಧೋಪಚಾರಗಳ ಬಳಕೆ ಮತ್ತು ಚಿಕಿತ್ಸಕ ಬಳಕೆಯ ವಿನಾಯಿತಿಗಳು

ಕ್ರೀಡಾಪಟುವಿನ ಆರೋಗ್ಯ ಮಹತ್ವದ್ದಾಗಿದೆ. ಕಾನೂನುಬದ್ಧ ವೈದ್ಯಕೀಯ ಕಾರಣಗಳಿಗಾಗಿ, ನಿಷೇಧಿತ ವಸ್ತುವನ್ನು ಹೊಂದಿರುವ ಔಷಧವನ್ನು ಬಳಸಬೇಕಾದ ಅಥವಾ ನಿಷೇಧಿತ ವಿಧಾನವನ್ನು ಬಳಸಬೇಕಾದ ಕ್ರೀಡಾಪಟುವಿಗೆ ಹಾಗೆ ಮಾಡಲು ಸಾಧ್ಯವಾಗುತ್ತದೆ. ನಿಷೇಧಿತ ಪಟ್ಟಿಯಲ್ಲಿ ಪಟ್ಟಿ ಮಾಡಲಾದ ಘಟಕಾಂಶಗಳನ್ನು ಹೊಂದಿರುವ ಔಷಧಗಳ ಅಗತ್ಯವಿರುವ ಅನಾರೋಗ್ಯ ಅಥವಾ ಸ್ಥಿತಿಯನ್ನು ಹೊಂದಿರುವ ಕ್ರೀಡಾಪಟುಗಳು ಚಿಕಿತ್ಸಕ ಬಳಕೆಯ ವಿನಾಯಿತಿ (ಟಿಯುಇ) ಪಡೆಯಬೇಕಾಗುತ್ತದೆ.

ನಿಷೇಧಿತ ವಸ್ತು ಅಥವಾ ವಿಧಾನವನ್ನು ಬಳಸುವುದನ್ನು ಒಳಗೊಂಡಿದ್ದರೂ ಸಹ, ಕ್ರೀಡಾಪಟುಗಳಿಗೆ ವೈದ್ಯಕೀಯ ಸ್ಥಿತಿಗಳಿಗೆ ಚಿಕಿತ್ಸೆ ನೀಡುವುದನ್ನು ಟಿಯುಇ ಖಚಿತಪಡಿಸುತ್ತದೆ, ಆದರೆ ಶಿಕ್ಷೆಗೆ ಒಳಗಾಗುವ ಅಪಾಯವನ್ನು ತಪ್ಪಿಸುತ್ತದೆ. ಟಿಯುಇ ಅನ್ನು ಕೆಳಕಂಡವುಗಳಿಗಾಗಿ ಅನುಮತಿಸಲಾಗಿದೆ:

- ರೋಗನಿರ್ಣಯ ಮಾಡಲಾದ ವೈದ್ಯಕೀಯ ಸ್ಥಿತಿ
- ನಿಗದಿತ ಅವಧಿ
- ನಿಗದಿತ ಡೋಸ್ ಮತ್ತು ಬಳಕೆಯ ಆವರ್ತನ
- ನಿಗದಿತ ಸೇವನೆಯ ವಿಧಾನ



ಕ್ರೀಡಾಪಟುವಾಗಿ ಯಾವುದೇ ಔಷಧವನ್ನು ತೆಗೆದುಕೊಳ್ಳುವ ಮೊದಲು ನೀವು ಪಟ್ಟಿ ಅಥವಾ ನಾಡಾದಲ್ಲಿ ಅದರ ಸ್ಥಿತಿಯನ್ನು ಪರಿಶೀಲಿಸಬೇಕು. ಈ ವಸ್ತು ನಿಷೇಧಿತವಾಗಿದ್ದರೆ, ನೀವು ಟಿಯುಇಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ.

ಟಿಯುಇ ಪ್ರಕ್ರಿಯೆ



ವೈದ್ಯರು

ಕ್ರೀಡಾಪಟು ತನ್ನ ವೈದ್ಯರನ್ನು ಭೇಟಿ ಮಾಡಿದಾಗ ನಿಷೇಧಿತ ವಸ್ತು ಅಥವಾ ವಿಧಾನದ ಬಳಕೆಯ ಅಗತ್ಯವಿರುವ ವೈದ್ಯಕೀಯ ಸ್ಥಿತಿಯ ಪತ್ತೆ

ಕ್ರೀಡಾಪಟು

ಟಿಯುಇಗೆ ಅರ್ಜಿ ಸಲ್ಲಿಸುವುದು

ಎಡಿಒ ಟಿಯುಇ ವ್ಯವಸ್ಥಾಪಕರು / ನಿರ್ವಾಹಕರು

ಪೂರ್ಣಗೊಳಿಸಿದ ಅರ್ಜಿಯನ್ನು ಎಡಿಒ ಟಿಯುಇಸಿಗೆ ಸಲ್ಲಿಸುವುದು

ಟಿಯುಇಸಿ

ನಿರ್ಧಾರವನ್ನು ಸಲ್ಲಿಸಲು 21 ದಿನಗಳು

ಟಿಯುಇಸಿ ನಿರ್ಧಾರವನ್ನು ಕ್ರೀಡಾಪಟುವಿಗೆ ತಿಳಿಸುವುದು ಮತ್ತು ಎಡಿಎಎಂಎಸ್‌ನಲ್ಲಿ ದಾಖಲಿಸುವುದು



ಕ್ರೀಡಾಪಟುಗಳು ವೈದ್ಯಕೀಯ ವಸ್ತು ಅಥವಾ ಸೇವನೆಯ ವಿಧಾನವನ್ನು ಸೂಚಿನೆಯನ್ನು ಪಡೆದುಕೊಂಡ ನಂತರ ಸಾಧ್ಯವಾದಷ್ಟು ಬೇಗ ಟಿಯುಇಗೆ ಅರ್ಜಿ ಸಲ್ಲಿಸಬೇಕು. ಈ ವಸ್ತುವನ್ನು ಸ್ಪರ್ಧೆಯಲ್ಲಿ ಮಾತ್ರ ನಿಷೇಧಿಸಿದ್ದರೆ, ಸ್ಪರ್ಧೆಗೆ ಕನಿಷ್ಠ 30 ದಿನಗಳ ಮೊದಲು ಅರ್ಜಿ ಸಲ್ಲಿಸಲು ಮರೆಯದಿರಿ.

ಡೋಪಿಂಗ್ ನಿಯಂತ್ರಣ ಕಾರ್ಯವಿಧಾನ

ಕ್ರೀಡಾಪಟುಗಳನ್ನು ಯಾವುದೇ ಸಮಯದಲ್ಲಿ ಎಲ್ಲಿ ಬೇಕಾದರೂ ಪರೀಕ್ಷಿಸಬಹುದು. ಪರೀಕ್ಷೆಯನ್ನು ಸ್ಪರ್ಧೆಯ ಒಳಗೆ, ಸ್ಪರ್ಧೆಯ ಹೊರಗೆ, ತರಬೇತಿ ಸ್ಥಳಗಳಲ್ಲಿ ಅಥವಾ ಕ್ರೀಡಾಪಟುವಿನ ಮನೆ ಅಥವಾ ಪ್ರಸ್ತುತ ವಾಸಸ್ಥಳದಲ್ಲಿಯೂ ಸಹ ನಡೆಸಬಹುದು. ಯಾವುದೇ ಪೂರ್ವ ಸೂಚನೆ ಇಲ್ಲದೆ ಪರೀಕ್ಷೆಯನ್ನು ನಡೆಸಲಾಗುತ್ತದೆ.

ಕ್ರೀಡಾಪಟುಗಳನ್ನು ಡೋಪಿಂಗ್ ನಿಯಂತ್ರಣ (ಪರೀಕ್ಷೆ) ಕ್ಕಾಗಿ ಆಯ್ಕೆ ಮಾಡಿದಾಗ, ಅವರು ಈ ಕೆಳಕಂಡ ಪ್ರಕ್ರಿಯೆಯನ್ನು ಅನುಸರಿಸಬೇಕಾಗುತ್ತದೆ:

ಮೂತ್ರದ ಮಾದರಿ ಸಂಗ್ರಹಕ್ಕಾಗಿ





- ಕ್ರೀಡಾಪಟುಗಳು ಸೀಲ್ ಮಾಡಲಾದ ಮತ್ತು ಹಾನಿಗೊಳಗಾಗದ ಮಾದರಿ ಸಂಗ್ರಹಣಾ ಪಾತ್ರೆಯನ್ನು ಆಯ್ಕೆ ಮಾಡುತ್ತಾರೆ.
- ಕ್ರೀಡಾಪಟುವಿನ ಲಿಂಗದವರೇ ಆದ ಡಿಸಿಒ ಮಾದರಿ ಸಂಗ್ರಹಿಸುವುದನ್ನು ವೀಕ್ಷಿಸುತ್ತಾರೆ.
- ಕ್ರೀಡಾಪಟುಗಳು ಸೀಲ್ ಮಾಡಲಾದ, ಹಾನಿಗೊಳಗಾಗದ ಮತ್ತು ಒಂದೇ ಸಂಖ್ಯೆಗಳನ್ನು (ಕೋಡ್ಗಳು) ಹೊಂದಿರುವ ಸಂಗ್ರಹ ಕಿಟ್ ಅನ್ನು ಆಯ್ಕೆ ಮಾಡುತ್ತಾರೆ.
- ಕ್ರೀಡಾಪಟುಗಳು ಮೂತ್ರದ ಮಾದರಿಯನ್ನು "A " ಮತ್ತು "B " ಬಾಟಲಿಗಳಾಗಿ ವಿಂಗಡಿಸಿ ಅವುಗಳನ್ನು ಸೀಲ್ ಮಾಡುತ್ತಾರೆ.
- ಕ್ರೀಡಾಪಟುಗಳು ಡೋಪಿಂಗ್ ಕಂಟ್ರೋಲ್ ಫಾರ್ಮ್ (ಡಿಸಿಎಫ್) ನಲ್ಲಿರುವ ಮಾಹಿತಿಯನ್ನು ಪರಿಶೀಲಿಸುತ್ತಾರೆ ಮತ್ತು ಅವರ ತರಬೇತುದಾರರ ಹೆಸರು, ಕಳೆದ 7 ದಿನಗಳಲ್ಲಿ ಅವರು ತೆಗೆದುಕೊಂಡ ಔಷಧಗಳು ಮತ್ತು ಪೂರಕಗಳಂತಹ ಕೆಲವು ವಿವರಗಳನ್ನು ದಾಖಲಿಸುತ್ತಾರೆ - ಪ್ರತಿಯನ್ನು ಅವರ ಇಮೇಲ್ ವಿಳಾಸಕ್ಕೆ ಕಳುಹಿಸಲಾಗುತ್ತದೆ.

ಡೋಪಿಂಗ್ ನಿಯಂತ್ರಣ ಪ್ರಕ್ರಿಯೆಯ ಕುರಿತಾಗಿ ಯಾವುದೇ ಕಾಳಜಿಗಳಿದ್ದರೆ, ಕ್ರೀಡಾಪಟುಗಳು ಅವುಗಳನ್ನು ಡಿಸಿಎಫ್ ಅಥವಾ ಪೂರಕ ವರದಿ ಫಾರ್ಮ್ನಲ್ಲಿ ಬರೆಯಬಹುದು.

ಮಾದರಿಗಳನ್ನು ವಾಡಾ ಮಾನ್ಯತೆ ಪಡೆದ ಪ್ರಯೋಗಾಲಯಕ್ಕೆ ಗೌಪ್ಯವಾಗಿ ಕಳುಹಿಸಲಾಗುತ್ತದೆ; ಇದರರ್ಥ ಅವರಿಗೆ ಕ್ರೀಡಾಪಟುವಿನ ಹೆಸರು ಅಥವಾ ರಾಷ್ಟ್ರೀಯತೆ ತಿಳಿದಿರುವುದಿಲ್ಲ, ಕೇವಲ ಮಾದರಿ ಸಂಖ್ಯೆಯಷ್ಟೇ ತಿಳಿದಿರುತ್ತದೆ.

• ಮಾದರಿ 'A' ಅನ್ನು ತೆರೆದು ವಿಶ್ಲೇಷಿಸಲಾಗುತ್ತದೆ
• ಮಾದರಿ 'A' ಪಾಸಿಟಿವ್ ಆಗಿದ್ದರೆ, ಅಲ್ಲಿಗೆ ಪ್ರಕ್ರಿಯೆ ಮುಕ್ತಾಯವಾಗುತ್ತದೆ
• ಮಾದರಿಗಳನ್ನು 10 ವರ್ಷಗಳವರೆಗೆ ಸಂಗ್ರಹಿಸಬಹುದು ಮತ್ತು ಮತ್ತಷ್ಟು ವಿಶ್ಲೇಷಿಸಬಹುದಾಗಿದೆ
• ಮಾದರಿ 'B' ಅನ್ನು ಸುರಕ್ಷಿತವಾಗಿ ಸಂಗ್ರಹಿಸಲಾಗುತ್ತದೆ

A ಮಾದರಿ ಪರೀಕ್ಷೆಯು ಪಾಸಿಟಿವ್ ಆಗಿದ್ದರೆ

• ಕ್ರೀಡಾಪಟು ವಿನಂತಿಸಿದರೆ ಮಾದರಿ B ಅನ್ನು ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳದ ಬಗ್ಗೆ ಕ್ರೀಡಾಪಟುವಿಗೆ ಮಾಹಿತಿ ನೀಡಲಾಗುತ್ತದೆ.
• ಕ್ರೀಡಾಪಟು ಮಾದರಿ B ಅನ್ನು ವಿಶ್ಲೇಷಿಸದಿರಲು ಆಯ್ಕೆ ಮಾಡಬಹುದು
• ಕ್ರೀಡಾಪಟು ಮತ್ತು/ಅಥವಾ ಅವರ ಪ್ರತಿನಿಧಿಗೆ ಮಾದರಿ B ತೆರೆಯುವಿಕೆಗೆ ಹಾಜರಾಗಲು ಅವಕಾಶವನ್ನು ನೀಡಬೇಕು.
• ಮಾದರಿ B ಅನ್ನು ತೆರೆಯುವ ಸಮಯದಲ್ಲಿ ಕ್ರೀಡಾಪಟು ಹಾಜರಿರುವ ಹಕ್ಕನ್ನು ಸಹ ಬಿಟ್ಟುಕೊಡಬಹುದು.

ಮಾದರಿ B ಪರೀಕ್ಷೆ ಪಾಸಿಟಿವ್ ಆಗಿದ್ದರೆ

• ಬಿ ಮಾದರಿ B ಯು ಮಾದರಿ A ಅಲ್ಲಿ ಪತ್ತೆಹಚ್ಚಿರುವುದನ್ನು ದೃಢಪಡಿಸಿದರೆ ಅಥವಾ ಕ್ರೀಡಾಪಟು ಮಾದರಿ B ಅನ್ನು ವಿಶ್ಲೇಷಿಸದಿರಲು ನಿರ್ಧರಿಸಿದರೆ, ಮಾದರಿ A ಯಿಂದ ಪತ್ತೆಹಚ್ಚಿರುವುದನ್ನು ಆಪಾದಿತ ಎಡಿಆರ್ವಿ ಎಂದು ಪರಿಗಣಿಸಲಾಗುತ್ತದೆ.

ರಕ್ತದ ಮಾದರಿ ಸಂಗ್ರಹಕ್ಕಾಗಿ

ಕೆಲವೊಮ್ಮೆ ರಕ್ತವನ್ನು ಸಂಗ್ರಹಿಸಲಾಗುತ್ತದೆ. ಪ್ರಕ್ರಿಯೆಯು ಒಂದೇ ಆಗಿದೆ:
• ರಕ್ತ ಸಂಗ್ರಹಣೆಯಲ್ಲಿ ತರಬೇತಿ ಮತ್ತು ಸಾಕಷ್ಟು ಅರ್ಹತೆಗಳನ್ನು ಹೊಂದಿರುವ ರಕ್ತ ನಿಯಂತ್ರಣ ಅಧಿಕಾರಿ (ಬಿಸಿಒ) ರಕ್ತವನ್ನು ಸಂಗ್ರಹಿಸುತ್ತಾರೆ.

• ಕ್ರೀಡಾಪಟುಗಳು ಸೀಲ್ ಮಾಡಲಾದ, ಹಾನಿಯಾಗದ ಮತ್ತು ಒಂದೇ ಸಂಖ್ಯೆಗಳನ್ನು ಹೊಂದಿರುವ ರಕ್ತದ ಮಾದರಿ ಸಂಗ್ರಹಣಾ ಕಿಟ್ ಅನ್ನು ಆಯ್ಕೆ ಮಾಡುತ್ತಾರೆ.

• ರಕ್ತ ಸಂಗ್ರಹಿಸುವ ಮೊದಲು ಕ್ರೀಡಾಪಟುಗಳು 10 ನಿಮಿಷಗಳ ಕಾಲ (ವಿಶ್ರಾಂತಿಯಲ್ಲಿ) ಕುಳಿತುಕೊಳ್ಳಬೇಕು.

• ಕ್ರೀಡಾಪಟು ಜೈವಿಕ ಪಾಸ್ಪೋರ್ಟ್ (ಎಬಿಪಿ) ರಕ್ತ ಪರೀಕ್ಷೆ ಸಂಗ್ರಹಣೆಗಿಂತ ಎರಡು ಗಂಟೆ ಮೊದಲು ಕ್ರೀಡಾಪಟುಗಳು ಸ್ಪರ್ಧಿಸಿರುವಂತಿಲ್ಲ ಅಥವಾ ತರಬೇತಿ ಪಡೆದಿರುವಂತಿಲ್ಲ, ಆದ್ದರಿಂದ, ಅವರು ಆ ಅವಧಿಯಲ್ಲಿ ಸಕ್ರಿಯರಾಗಿದ್ದರೆ ಕ್ರೀಡಾಪಟುವಿಗೆ ದೀರ್ಘಕಾಲದವರೆಗೆ ಆರೈಕೆಯ ಅಗತ್ಯವುಂಟಾಬಹುದು.



ಅಥ್ಲೀಟ್ ಬಯೋಲಾಜಿಕಲ್ ಪಾಸ್ಪೋರ್ಟ್

ಅಥ್ಲೀಟ್ ಬಯೋಲಾಜಿಕಲ್ ಪಾಸ್ಪೋರ್ಟ್ (ಎಬಿಪಿ)ನ ಮೂಲಭೂತ ತತ್ವ, ಡೋಪಿಂಗ್ ವಸ್ತು ಅಥವಾ ವಿಧಾನವನ್ನು ಪತ್ತೆಹಚ್ಚುವ ಬದಲು, ಡೋಪಿಂಗ್‌ನ ಪರಿಣಾಮಗಳನ್ನು ಪರೋಕ್ಷವಾಗಿ ಬಹಿರಂಗಪಡಿಸುವ ಆಯ್ದ ಬಯೋಲಾಜಿಕಲ್ ಅಸ್ಥಿರಗಳನ್ನು ಮೇಲ್ವಿಚಾರಣೆ ಮಾಡುವುದಾಗಿದೆ. ಎಡಿಒಗಳು ಎಬಿಪಿಯನ್ನು ದೃಢವಾದ ಡೋಪಿಂಗ್ ತಡೆ ಪ್ರೋಗ್ರಾಮ ದೊಡ್ಡ ಚೌಕಟ್ಟಿನೊಳಗೆ ಸಂಯೋಜಿಸಬಹುದು, ಇದರಿಂದ ಈ ಕೆಳಗಿನ ಪ್ರಯೋಜನಗಳು ಉಂಟಾಗುತ್ತವೆ:

- ಪಾಸ್ಪೋರ್ಟ್ ಡೇಟಾದ ಇಂಟೆಲಿಜೆಂಟ್ ಮತ್ತು ಸಕಾಲಿಕ ವ್ಯಾಖ್ಯಾನದ ಮೂಲಕ ಹೆಚ್ಚಿನ ಗಮನದ ಅಗತ್ಯವಿರುವ ಕ್ರೀಡಾಪಟುಗಳನ್ನು ಗುರುತಿಸುವುದು. ಕ್ರೀಡಾಪಟುಗಳ ಪರೀಕ್ಷೆ ಅಥವಾ ತನಿಖೆಗಳಂತಹ ಡೋಪಿಂಗ್ ತಡೆ ಚಟುವಟಿಕೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಲು ಬಳಸಬಹುದಾದ ಅಮೂಲ್ಯ ಮಾಹಿತಿಯನ್ನು ಎಬಿಪಿಯು ಒದಗಿಸುತ್ತದೆ; ಮತ್ತು ವಿಶ್ವ ಡೋಪಿಂಗ್ ತಡೆ ಸಂಹಿತೆಯ ಅನುಚ್ಛೇದ 2.2 ನ (ಕ್ರೀಡಾಪಟುಗಳು ನಡೆಸುವ ನಿಷೇಧಿತ ವಸ್ತು ಅಥವಾ ನಿಷೇಧಿತ ವಿಧಾನದ ಬಳಕೆ ಅಥವಾ ಪ್ರಯತ್ನ) ಅನುಸಾರವಾಗಿ ಸಂಭಾವ್ಯ ಡೋಪಿಂಗ್ ತಡೆ ನಿಯಮ ಉಲ್ಲಂಘನೆಗಳನ್ನು (ಎಡಿಆರ್ವಿಗಳು) ಅನುಸರಿಸುವುದು. (ಕೋಡ್)
- ಎಬಿಪಿ ಕುರಿತಾದ ಹೆಚ್ಚಿನ ಮಾಹಿತಿಗಾಗಿ, https://nadaindia.yas.gov.in ನಲ್ಲಿ ನಾಡಾ ವೆಬ್‌ಸೈಟ್‌ಗೆ ಭೇಟಿ ನೀಡಿ.

ಒಣಗಿದ ರಕ್ತದ ಕಲೆ (ಡಿಬಿಎಸ್) ಮಾದರಿ ಸಂಗ್ರಹ

ಡಿಬಿಎಸ್ ಎನ್ನುವುದು ಕ್ರೀಡಾಪಟುವಿನ ಬೆರಳ ತುದಿಯನ್ನು ಚುಚ್ಚುವ ಮೂಲಕ ಕೆಲವು ಹನಿ ರಕ್ತವನ್ನು ಸಂಗ್ರಹಿಸುವ ಒಂದು ವಿಧಾನವಾಗಿದೆ. ರಕ್ತದ ಹನಿಗಳನ್ನು ವಿಶೇಷ ಫಿಲ್ಟರ್ ಪೇಪರ್ ಕಾರ್ಡ್‌ಗಳ ಮೇಲೆ ಇರಿಸಲಾಗುತ್ತದೆ, ಇದನ್ನು ವಾಡಾ- ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ವಿಶ್ಲೇಷಿಸಲಾಗುತ್ತದೆ. ಕ್ಯಾಪಿಲ್ಲರಿ ರಕ್ತದ ಮಾದರಿಗಳ ಸಂಗ್ರಹಣೆಯಲ್ಲಿ ತರಬೇತಿ ಮತ್ತು ಸಾಕಷ್ಟು ಅರ್ಹತೆಗಳನ್ನು ಹೊಂದಿರುವ ಡಿಸಿಒ ಅಥವಾ ಬಿಸಿಒ ಮಾದರಿಯನ್ನು ಸಂಗ್ರಹಿಸುತ್ತಾರೆ.

ಒಣಗಿದ ರಕ್ತದ ಕಲೆ (ಡಿಬಿಎಸ್) ವಿಶ್ಲೇಷಣೆಗಾಗಿ, ಕ್ರೀಡಾಪಟುವಿನ ಮೇಲೆ ಅಥವಾ ಅವರ ಕ್ರೀಡಾ ಕಾರ್ಯಕ್ಷಮತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆಯಿಲ್ಲದ ಚುಚ್ಚುವುದಕ್ಕೆ ಅತ್ಯಂತ ಸೂಕ್ತವಾದ ಭಾಗವನ್ನು ಬಿಸಿಒ ನಿರ್ಣಯಿಸುತ್ತಾರೆ. ಕ್ರೀಡಾಪಟು ಮಾದರಿ ಸಂಗ್ರಹಣಾ ಭಾಗವನ್ನು ಬೆಚ್ಚಗಾಗಿಸುತ್ತಾರೆ. ಬಿಸಿಒ ರಕ್ತದ ಮಾದರಿ ಭಾಗವನ್ನು ಸ್ವೆರೈಲ್ ಸೋಂಕುನಿವಾರಕ ಪ್ಯಾಡ್ ಅಥವಾ ಸ್ವಾಬ್ನಿಂದ ಸೋಂಕುರಹಿತಗೊಳಿಸುತ್ತಾರೆ. ಬಿಸಿಒ ಬೆರಳ ತುದಿಯಿಂದ ಅಥವಾ ಮೇಲಿನ ತೋಳಿನಿಂದ ರಕ್ತವನ್ನು ಸಂಗ್ರಹಿಸುತ್ತಾರೆ. ಬಿಸಿಒ ಡಿಬಿಎಸ್ ಮಾದರಿಗಳನ್ನು 'A' ಮತ್ತು 'B' ಎಂದು ಲೇಬಲ್ ಮಾಡಲಾದ ಸುರಕ್ಷಿತ ಕಿಟ್ಗೆ ವರ್ಗಾಯಿಸುತ್ತಾರೆ.



ಕ್ರೀಡಾಪಟು ಇರುವ ಸ್ಥಳ

ಇರುವ ಸ್ಥಳದ ಮಾಹಿತಿಯು ಕ್ರೀಡಾಪಟುಗಳನ್ನು ಪರೀಕ್ಷೆಗೆ ಹುಡುಕಲು ಅನುವು ಮಾಡಿಕೊಡುವ ಮಾಹಿತಿಯಾಗಿದೆ. ಇದು ಕ್ರೀಡಾಪಟುಗಳನ್ನು ಪರೀಕ್ಷಿಸಲು ಅಧಿಕಾರ ಹೊಂದಿರುವವರು ಬಳಸುವ ಮಾಹಿತಿಯಾಗಿದೆ. ಮಾಹಿತಿಯನ್ನು ಒದಗಿಸದಿರುವುದು ಅಥವಾ ತಪ್ಪಾದ ಅಥವಾ ದಾರಿತಪ್ಪಿಸುವ ಮಾಹಿತಿಯನ್ನು ಒದಗಿಸುವುದು ಕ್ರಮ ತೆಗೆದುಕೊಳ್ಳುವುದಕ್ಕೆ ಕಾರಣವಾಗಬಹುದು.

ಆರ್ಟಿಪಿಯಲ್ಲಿರುವ ಎಲ್ಲಾ ಕ್ರೀಡಾಪಟುಗಳು ಪ್ರತಿ ತ್ರೈಮಾಸಿಕಕ್ಕೂ ಮುಂಚಿತವಾಗಿ ನಿಖರವಾದ ಸ್ಥಳ ಮಾಹಿತಿಯನ್ನು ಒದಗಿಸಬೇಕು. ಯೋಜಿತ ಅಥವಾ ಯೋಜಿತವಲ್ಲದ ಪ್ರಯಾಣವನ್ನು ಮಾಡುತ್ತಿರುವಾಗ, ಯೋಜಿತವಲ್ಲದ ತುರ್ತು ಪರಿಸ್ಥಿತಿಗಳಲ್ಲೂ ಕೂಡ, ಆಂಟಿ-ಡೋಪಿಂಗ್ ಅಡ್ಮಿನಿಸ್ಟ್ರೇಷನ್ & ಮ್ಯಾನೇಜ್ಮೆಂಟ್ ಸಿಸ್ಟಮ್ (ಎಡಿಎಎಂಎಸ್) ಅನ್ನು ಬಳಸಬೇಕು. ನಿಮ್ಮನ್ನು ಸುಲಭವಾಗಿ ಪತ್ತೆಹಚ್ಚಲು ಸಹಾಯ ಮಾಡುವಂತಹ ಸ್ಪಷ್ಟ ಸೂಚನೆಗಳನ್ನು ಒದಗಿಸಬೇಕು.

A ಮಾದರಿಯು ಪಾಸಿಟಿವ್ ಎಂದು ಪರೀಕ್ಷಿಸಿದರೆ

ನೋಂದಾಯಿತ ಪರೀಕ್ಷಾ ಪೂಲ್ (ಆರ್ಟಿಪಿ) ನಲ್ಲಿ ಕ್ರೀಡಾಪಟುಗಳನ್ನು ಇರಿಸುವ ಅಂತಿಮ ನಿರ್ಧಾರವನ್ನು ನಾಡಾ ಇಂಡಿಯಾ ಸಂಸ್ಥೆ ತೆಗೆದುಕೊಳ್ಳುತ್ತದೆ. ಈ ಆಯ್ಕೆಯು ವಾಡಾ ಪ್ರಕಟಿಸಿದ ಅಂತರರಾಷ್ಟ್ರೀಯ ಪರೀಕ್ಷಾ ಮತ್ತು ತನಿಖೆ ಮಾನದಂಡಗಳಿಗೆ ಅನುಗುಣವಾಗಿದೆ. ನಾಡಾ ಇಂಡಿಯಾ ನಿಯಮಿತವಾಗಿ ಆರ್ಟಿಪಿಯ ಮಾನದಂಡಗಳನ್ನು ಪರಿಶೀಲಿಸುತ್ತದೆ ಮತ್ತು ಅಪ್ಡೇಟ್ ಮಾಡುತ್ತದೆ ಮತ್ತು ಸಂಬಂಧಿತ ಮಾನದಂಡಗಳಿಗೆ ಅನುಗುಣವಾಗಿ ಪಟ್ಟಿಯನ್ನು ಪರಿಷ್ಕರಿಸುತ್ತದೆ.

ನೋಂದಾಯಿತ ಪರೀಕ್ಷಾ ಪೂಲ್ನಲ್ಲಿರುವ ಪ್ರತಿಯೊಬ್ಬ ಕ್ರೀಡಾಪಟು ಕಡ್ಡಾಯವಾಗಿ ಮಾಡಬೇಕಾದವುಗಳು:

- ಅಂತರರಾಷ್ಟ್ರೀಯ ಪರೀಕ್ಷಾ ಮಾನದಂಡ (ಐಎಸ್ಟಿಐ) ನಿರ್ದಿಷ್ಟಪಡಿಸಿದ ರೀತಿಯಲ್ಲಿ, ತ್ರೈಮಾಸಿಕ ಆಧಾರದ ಮೇಲೆ ನಾಡಾ ಇಂಡಿಯಾಗೆ ಅವರ ಸ್ಥಳದ ಬಗ್ಗೆ ಮಾಹಿತಿ ನೀಡುವುದು.
- ಎಲ್ಲಾ ಸಮಯದಲ್ಲೂ ನಿಖರ ಮತ್ತು ಸಂಪೂರ್ಣ ಮಾಹಿತಿಯನ್ನು ಅಪ್ಡೇಟ್ ಮಾಡುವುದು.
- ಅಗತ್ಯವಿದ್ದಾಗಲೆಲ್ಲಾ ಆ ಸ್ಥಳಗಳಲ್ಲಿ ಪರೀಕ್ಷೆಗೆ ಲಭ್ಯವಾಗುವುದು.



ಧ್ವನಿಯೆತ್ತಿ

ಕ್ರೀಡೆಯ ಪಾರದರ್ಶಕತೆಯನ್ನು ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಕ್ರೀಡೆಯ ಪಾರದರ್ಶಕತೆಗಾಗಿ, ಕ್ರೀಡೆಯಲ್ಲಿ ಭಾಗವಹಿಸುವವರು ಡೋಪಿಂಗ್ ಬಗ್ಗೆ ಅನುಮಾನ ಬಂದಾಗ ಧ್ವನಿಯೆತ್ತುವುದು ಅಗತ್ಯವಾಗಿದೆ. ಕ್ರೀಡಾಪಟುಗಳು ಅಥವಾ ತರಬೇತುದಾರರು ಕ್ರೀಡೆಯ ಪಾರದರ್ಶಕತೆಗೆ ವಿರುದ್ಧವಾದ ಚಟುವಟಿಕೆಯನ್ನು ಅನುಮಾನಿಸಿದರೆ, ಸಾಕ್ಷಿಯಾದರೆ ಅಥವಾ ಮಾಹಿತಿಯನ್ನು ಹೊಂದಿದ್ದರೆ, ಅದನ್ನು ವರದಿ ಮಾಡುವುದು ಅವರ ಜವಾಬ್ದಾರಿಯಾಗಿದೆ. ಕ್ರೀಡೆಯ ಪಾರದರ್ಶಕತೆಯನ್ನು ರಕ್ಷಿಸಲು ಮಾಹಿತಿಯನ್ನು ವರದಿ ಮಾಡಲು ಮತ್ತು ಹಂಚಿಕೊಳ್ಳಲು ವಿಭಿನ್ನ ಮಾರ್ಗಗಳಿವೆ.

ಸ್ಪೀಕ್ ಅಪ್ - ವಾಡಾದ ರಿಪೋರ್ಟಿಂಗ್ ಪ್ಲಾಟ್‌ಫಾರ್ಮ್

ವಾಡಾದ ಸ್ಪೀಕ್ ಅಪ್ ಪ್ಲಾಟ್‌ಫಾರ್ಮ್‌ನಲ್ಲಿ ವ್ಯಕ್ತಿ ಅಥವಾ ಸಂಸ್ಥೆಯ ಬಗ್ಗೆ ಯಾವುದೇ ಮಾಹಿತಿಯನ್ನು ಕಟ್ಟುನಿಟ್ಟಾಗಿ ಗೌಪ್ಯ ರೀತಿಯಲ್ಲಿ ವರದಿ ಮಾಡಲು ಸಾಧ್ಯವಾಗುತ್ತದೆ. ಶಂಕಿತ ಡೋಪಿಂಗ್ - ಯಾವುದೇ ಎಡಿಆರ್‌ವಿ ಅಥವಾ ಪಾರದರ್ಶಕ ಕ್ರೀಡೆಗೆ ವಿರುದ್ಧವಾಗಬಹುದಾದ ಯಾವುದೇ ಕೃತ್ಯ ಅಥವಾ ಲೋಪವನ್ನು ನೀವು https://speakup.wada-ama.org/frontpage ಮೂಲಕ ವರದಿ ಮಾಡಬಹುದು.

ನಾಡಾ ಇಂಡಿಯಾದ ಸ್ಪೀಕ್ ಅಪ್ ಪ್ಲಾಟ್‌ಫಾರ್ಮ್

ಸ್ಪೀಕ್ ಅಪ್ ಪ್ಲಾಟ್‌ಫಾರ್ಮ್, ನಾಡ ಇಂಡಿಯಾದ ಅತ್ಯಗತ್ಯ ಉಪಕ್ರಮವಾಗಿದ್ದು ಕ್ರೀಡಾಪಟುಗಳು, ಬೆಂಬಲ ಸಿಬ್ಬಂದಿ ಮತ್ತು ವಿಶಾಲ ಕ್ರೀಡಾ ಸಮುದಾಯಕ್ಕೆ ಯಾವುದೇ ಶಂಕಿತ ಎಡಿಆರ್‌ವಿಗಳನ್ನು ಗೌಪ್ಯವಾಗಿ ವರದಿ ಮಾಡಲು ಸಮರ್ಥರನ್ನಾಗಿಸುತ್ತದೆ. ಈ ಪ್ಲಾಟ್‌ಫಾರ್ಮ್ ಜಾಗತಿಕ ಅತ್ಯುತ್ತಮ ಅಭ್ಯಾಸಗಳನ್ನು ಹೋಲುತ್ತದೆ ಮತ್ತು ಕ್ರೀಡೆಯ ಸಮಗ್ರತೆಯನ್ನು ಕಾಪಾಡಿಕೊಳ್ಳುವ ಭಾರತದ ಬದ್ಧತೆಯನ್ನು ಬಲಪಡಿಸುತ್ತದೆ.

ಈ ಪ್ಲಾಟ್‌ಫಾರ್ಮ್ ಒದಗಿಸಿದ ಮಾಹಿತಿಯ ಗೌಪ್ಯತೆ ಮತ್ತು ಸುರಕ್ಷತೆಯನ್ನು ಖಚಿತಪಡಿಸುವುದಷ್ಟೇ ಅಲ್ಲದೇ ವಿಷಲ್ಬ್ಲೋವರ್‌ಗಳು ಪ್ರತೀಕಾರದ ಭಯವಿಲ್ಲದೆ ಸದುದ್ದೇಶದಿಂದ ವರದಿ ಮಾಡಲು ಅನುವು ಮಾಡಿಕೊಡುತ್ತದೆ. ವಿಷಲ್ಬ್ಲೋವರ್ ಸೌಕರ್ಯವನ್ನು ಅವಲಂಬಿಸಿ ವರದಿಗಳನ್ನು ಅನಾಮಧೇಯವಾಗಿ ಅಥವಾ ಸಂಪರ್ಕ ವಿವರಗಳೊಂದಿಗೆ ಸಲ್ಲಿಸಬಹುದು. ನೀವು ಯಾವುದೇ ಡೋಪಿಂಗ್ ಸಂಬಂಧಿತ ದುಷ್ಕೃತ್ಯವನ್ನು ಗಮನಿಸಿದರೆ, ಅದನ್ನು ತಕ್ಷಣವೇ speakup-nada@gov.in ಮೂಲಕ ವರದಿ ಮಾಡಿ.

ಈ ಉಪಕ್ರಮವು ಭಾರತದಲ್ಲಿ ಪಾರದರ್ಶಕ, ನೈತಿಕ ಮತ್ತು ನಿಷ್ಕಳಂಕ ಕ್ರೀಡಾ ವಾತಾವರಣವನ್ನು ಉತ್ತೇಜಿಸುವ ಮೂಲಕ ಪ್ಲೇ ಟ್ರೂನ ವಿಶಾಲ ಧ್ಯೇಯವನ್ನು ಬೆಂಬಲಿಸುತ್ತದೆ.

ಸಾಮಾಜಿಕ ಮಾಧ್ಯಮ
ಪ್ಲಾಟ್ಫಾರ್ಮ್ಗಳಿಗೆ
ಲಿಂಕ್ಗಳು:



ಟ್ವಿಟರ್ (X)
https://x.com/NADAIndiaOffice

ಇನ್ಸ್ಟಾಗ್ರಾಮ್
https://www.instagram.com/nadaindiaoffice/?hl=en

ಥ್ರೆಡ್ಸ್
https://www.threads.net/@nadaindiaoffice?xmt=AQGzvg7tK27f7focxy6LJ3bAbWdCEidXEy_-igxJrfoKCms

ಲಿಂಕ್ಡ್ಇನ್
https://www.linkedin.com/company/national-anti-doping-agency-india/

ಫೇಸ್ಬುಕ್
https://www.facebook.com/NADAIndiaOfficial

ಲಿಂಕ್ ಟ್ರೀ ಅನ್ನು ಪ್ರವೇಶಿಸಲು ಕ್ಯೂಆರ್ ಕೋಡ್

https://linktr.ee/NadaIndialinks

ಯಾವುದೇ ನಿಷೇಧಿತ ಔಷಧ ನಿಮ್ಮ ಕ್ರೀಡಾ ವೃತ್ತಿಜೀವನವನ್ನು ನಾಶಗೊಳಿಸಲು ಬಿಡಬೇಡಿ!

ನಿಷೇಧಿತ ಔಷಧ ಅಥವಾ ಅದರ ಘಟಕಾಂಶಗಳ ಪಟ್ಟಿಯನ್ನು ನಾಡಾ ಭಾರತದ ನೆರವಿನಿಂದ ಸುಲಭವಾಗಿ ಕಂಡುಕೊಳ್ಳುವ ಮೂಲಕ ಕ್ರೀಡಾಪಟುಗಳು ಆಕಸ್ಮಿಕ ಡೋಪಿಂಗ್ನಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಬಹುದು.

ನಿಮ್ಮ ಮೆಡಿಸಿನ್ ಆ್ಯಪ್ ಬಗ್ಗೆ ತಿಳಿದುಕೊಳ್ಳಿ

ಡೌನ್‌ಲೋಡ್ ಮಾಡಲು ಇಲ್ಲಿ ಸ್ಕ್ಯಾನ್ ಮಾಡಿ



ಗಮನಿಸಿ: ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಈ ಕಿರುಪುಸ್ತಕದ ಇಂಗ್ಲಿಷ್ ಆವೃತ್ತಿಯನ್ನು ಅಂತಿಮವೆಂದು ಪರಿಗಣಿಸಬೇಕು.

सत्यमेव जयते
Government of India

निष्पक्ष खेल
Play fair

ರಾಷ್ಟ್ರೀಯ ಉದ್ದೀಪನಮದ್ದು ತಡೆ ಸಂಸ್ಥೆ ಭಾರತ

ಯೂನಿಟ್ ಸಂಖ್ಯೆ 02, ಹಾಲ್ ಸಂಖ್ಯೆ 103-104, ಮೊದಲನೇ ಮಹಡಿ,
ಜವಾಹರಲಾಲ್ ನೆಹರು ಸ್ಟೇಡಿಯಂ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದೆಹಲಿ -110003
ದೂರವಾಣಿ: +91-11-24368274
ಇಮೇಲ್: info.nada@nic.in , edu-nadaindia@gov.in

#SAYNO TODOPING

ಇಂದು ಮತ್ತು ಪ್ರತಿದಿನ